# ಪರಿಸರ ಅಧ್ಯಯನ
# ENVIRONMENTAL SCIENCE

## ತರಗತಿ III

### ಭಾಗ – 1

### PART - I

ಕೇರಳ ಸರಕಾರ
ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2015

JT-333/ I EVS-3 (K) Vol-I

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by* :
**State Council of Educational Research and Training (SCERT)**
Poojappura, Thiruvananthapuram 695012, Kerala

*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಪುಟಾಣಿಗಳೇ,

ಪ್ರಕೃತಿಯ ಮಾಂತ್ರಿಕ ಕರಡಿಗೆಯಲ್ಲಿ ಏನೆಲ್ಲಾ
ರಸವತ್ತಾದ ಚಟುವಟಿಕೆಗಳಿವೆ!
ಮಣ್ಣಿನಲ್ಲಿ ನಡೆದು, ಆಕಾಶದ ದೃಶ್ಯಗಳನ್ನು ನೋಡಿ
ಹೂವಿನೊಂದಿಗೆ, ಚಿಟ್ಟೆಯೊಂದಿಗೆ
ಲಲ್ಲೆ ಮಾತುಗಳನ್ನಾಡಿ ನೀವು ಕಂಡುಹಿಡಿದ
ಅನೇಕ ವಿಷಯಗಳಿವೆ.
ಅವುಗಳನ್ನೆಲ್ಲಾ ನೆನಪಿಸಲು...
ಹೊಸ ತಿಳುವಳಿಕೆಗಳನ್ನು ಹಸ್ತಾಂತರಿಸಲು
ನಿಮ್ಮ ಸಂಗಾತಿಯಾಗಿ ಈ ಪುಸ್ತಕವು
ನಿಮ್ಮೊಂದಿಗೆ ಇರುವುದು.
ಪ್ರಕೃತಿಯ ಮಡಿಲಿನಲ್ಲಿ
ಇನ್ನೂ ಹಲವಾರು ವಿಷಯಗಳು ಅಡಗಿವೆ.
ಹೇಳಿದಷ್ಟು ಮುಗಿಯದ ಅಂತಹ ಕೌತುಕಗಳನ್ನು
ಹುಡುಕಿಕೊಂಡು
ನಾವು ಜತೆಯಾಗಿ ಮುನ್ನಡೆಯೋಣ.
ವೀಕ್ಷಿಸಿ, ಆಲಿಸಿ, ಪ್ರಯೋಗ ನಡೆಸಿ
ಈ ವರ್ಣರಂಜಿತ ಪ್ರಪಂಚವನ್ನು ಗೆಲ್ಲೋಣ.



ಪ್ರೀತಿಪೂರ್ವಕ,

**ಡಾ. ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

# TEXTBOOK DEVELOPMENT TEAM

## PARTICIPANTS

**Pradeep Thanoor**
Thanaloor A.M.L.P.S.
**Rajan P.P.**
GUPS Mundothparamba
**Biju Mathew**
GHSS Kadungapuram
**Jahangeer Kabeer T.P.**
Feroke College, LPS.
**K. John**
GNKMGHSS Dhanuvachapuram

**Jolly J.R.**
SASUPS
Venganoor
**Muhammed Swalih**
AMLPS
Pattarkadavu
**Sajeev Kumar P.R.**
GLPS Rosemala
**Prameela**
BRC Tirur

### Experts

**Dr. Alavuddin A**
Principal (Rtd.), Govt. College,
Elerithatt
**Dr. S. Mohanan**
Reader & HOD Physics (Rtd),
University College,
Thiruvananthapuram
**Paul P.I.**
Associate Prof., Mar Ivanios College

### Artists

**Moosa Musthajeeb E.C.**
MMETHS Melmuri
**Noushad Ali E.M.**
Ganapath AUPS Kighissery
**Vijayakumar** , GUPS Nemam
**Shameem**
AUPS Kavanoor
**Lohithakshan K.**
Assissi Deaf School, Malapparamba

### Academic Co-ordinator

**Dr. Ancey Verghese**
Research Officer, SCERT, Kerala

# KANNADA VERSION

## PARTICIPANTS

**Krishnamoorthi M.S.**
GHSS Paivalike Nagar
**B. Jayarama Rai**
GHSS Belluru
**Durgaparameshwari P.**
GHSS Shiriya
**Kirana Shankara K.S.**
VALPS Ukkinadka

### Language Expert

**Dr. Rathnakara Mallamoole**
Asst. Professor, Govt. College,
Kasaragod


### Subject Expert

**Shashidhara M.,**
M.Sc., M.Ed.
DIET, Kasaragod

### Co-ordinator

**Faisal Mavulladathil**
Research Officer, SCERT, Kerala

**State Council of Educational Research and Training (SCERT)**
Vidyabhavan, Poojappura, Thiruvananthapuram-695012



# ಅನುಕ್ರಮಣಿಕೆ


1. ಮೊಗ್ಗರಳಿ ಹೂವಾಗಿ .................................. 07
2. ಇರುವೆಯಿಂದ ಆನೆಯ ವರೆಗೆ .................... 22
3. ನೀರು ಜೀವಾಮೃತ ..................................... 35
4. ಶುಚಿತ್ವ ನಮ್ಮ ಶಕ್ತಿ ....................................... 48
5. ರುಚಿಕರವೂ ಪೌಷ್ಠಿಕವೂ ............................ 60
6. ಹೊನ್ನು ಬೆಳೆಸುವ ಕೈಗಳು .......................... 76




JT-333/ 2 EVS-3 (K) Vol-I

## ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು ಈ ಪುಸ್ತಕದಲ್ಲಿ ಉಪಯೋಗಿಸಲಾಗಿದೆ



ಹೆಚ್ಚಿನ ಕಲಿಕೆಗಾಗಿ
(ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ)



ಆಶಯ ಸ್ಪಷ್ಟತೆಗಾಗಿ
ICT ಸಾಧ್ಯತೆ



ಕಲಿಕೆಯ ಪ್ರಧಾನ ಸಾಧನೆಗಳು



ಮೌಲ್ಯಮಾಪನ ಮಾಡೋಣ



ಮುಂದುವರಿದ ಚಟುವಟಿಕೆಗಳು

# 1 ಮೊಗ್ಗರಳಿ ಹೂವಾಗಿ

ಜೂನ್ 5

ನನಗೆ ಮತ್ತು ನನ್ನ ಸ್ನೇಹಿತರಿಗೆ ಇಂದು ಬಹಳ ಸಂತೋಷದ ದಿನ.

ಶಾಲೆಯಲ್ಲಿ ನಡೆದ ಪರಿಸರ ದಿನಾಚರಣೆಯ ಅಂಗವಾಗಿ ನಮಗೆಲ್ಲರಿಗೂ ಗಿಡ ಸಿಕ್ಕಿತು.

ಒಂದು ಸಣ್ಣ ಕೊಂದೆ ಗಿಡ ನನಗೆ ಲಭಿಸಿತು.

ಮನೆಗೆ ತಲುಪಿ ಗಿಡವನ್ನು ಅಜ್ಜನಿಗೆ ತೋರಿಸಿದೆ.

ತೋಟದಲ್ಲಿ ಗಿಡವನ್ನು ನೆಡಲು ಅಜ್ಜನೂ ನನಗೆ ಸಹಾಯ ಮಾಡಿದರು.

ಅಜ್ಜನು ಹಲವಾರು ಸಸ್ಯಗಳ ಕುರಿತು ತಿಳಿಸಿದರು. ತುಂಬೆ ಹೂ, ಹರಮುನಿ (ಮುಕ್ಕುಟ್ಟಿ), ಪುನರ್ನವ, ಕುರುಂದೋಟಿ ಎಂಬೀ ಸಸ್ಯಗಳ ಹೆಸರು ಆಗತಾನೆ ತಿಳಿಯಿತು. ತೋಟದಲ್ಲಿ ಮಾವು, ಹಲಸು, ಹುಣಸೆ, ತೆಂಗು ಮುಂತಾದ ಹಲವಾರು ಮರಗಳಿವೆ. ಅವೆಲ್ಲವೂ ಅಜ್ಜ ನೆಟ್ಟು ಬೆಳೆಸಿದ್ದು!

ನನ್ನ ಕೊಂದೆ ಗಿಡವು ಅದೇ ರೀತಿಯಲ್ಲಿ ಬೆಳೆದು ದೊಡ್ಡದಾಗಬಹುದು.

ಅದರಲ್ಲಿ ತುಂಬಾ ಹಳದಿ ಹೂಗಳು ಉಂಟಾಗಬಹುದು.



ನಿಮ್ಮ ಮನೆಯ ಸುತ್ತುಮುತ್ತಲು ಯಾವೆಲ್ಲಾ ವಿಧದ ಮರಗಳಿವೆ?

ಅದನ್ನು ನೆಟ್ಟು ಬೆಳೆಸಿದವರು ಯಾರು?

ನಮ್ಮ ಶಾಲಾಪರಿಸರದಲ್ಲಿಯೂ ಅನೇಕ ಮರ ಮತ್ತು ಗಿಡಗಳಿವೆಯಲ್ಲವೆ?

ಶಾಲಾಪರಿಸರವನ್ನು ನಿರೀಕ್ಷಿಸಿ ಸಸ್ಯಗಳ ಹೆಸರನ್ನು ಬರೆಯಿರಿ.

**ತೆಂಗು, ತುಂಬೆ, ದಾಸವಾಳ**

- - - - - - - - - - - - - - - - - - - - - - - - - - - -

ನಮ್ಮ ಸುತ್ತುಮುತ್ತಲಿರುವ ಸಸ್ಯಗಳೆಲ್ಲವೂ ಒಂದೇ ರೀತಿಯವುಗಳೆ?

ಮಾವಿನಂತಹ ದೊಡ್ಡ ಮರಗಳು ...
ತುಂಬೆಯಂತಹ ಸಣ್ಣ ಗಿಡಗಳು...
ಮಲ್ಲಿಗೆಯಂತೆ ಹರಡುವ ಬಳ್ಳಿಗಳು...
ಹೀಗೆ ಅದೆಷ್ಟೊ ಸಸ್ಯಗಳು!

ಸುತ್ತುಮುತ್ತಲಿರುವ ಸಸ್ಯಗಳನ್ನು ಅವುಗಳ ವೈಶಿಷ್ಟ್ಯಗಳಿಗನುಸಾರವಾಗಿ ವರ್ಗೀಕರಿಸಿರಿ.



| ಮರಗಳು | ಸಣ್ಣ ಗಿಡಗಳು | ಬಳ್ಳಿಗಳು |
|---|---|---|
| • ಹಲಸು | • ತುಳಸಿ | • ಮಲ್ಲಿಗೆ |
| • ಮಾವು | • ದಾಸವಾಳ | • ಹಾಗಲ |
| • | • | • |
| • | • | • |





## ಬಿದಿರಿನ ವಿಶೇಷತೆಗಳು

ಬಿದಿರು ಹುಲ್ಲು ಜಾತಿಗೆ ಸೇರಿದ ಅತ್ಯಂತ ದೊಡ್ಡ ಸಸ್ಯವಾಗಿದೆ. ಇದು ಅತಿ ವೇಗವಾಗಿ ಬೆಳೆಯುವ ಸಸ್ಯವಾಗಿದೆ. ಬಿದಿರು ಒಮ್ಮೆ ಮಾತ್ರವೇ ಹೂ ಬಿಡುವುದು. ಹೂ ಬಿಟ್ಟ ನಂತರ ಇದು ಸಂಪೂರ್ಣವಾಗಿ ನಾಶ ಹೊಂದುವುದು. ಸಾವಿರಾರು ಬೀಜಗಳನ್ನು ಮಣ್ಣಿನಲ್ಲಿ ನಿಕ್ಷೇಪಿಸಿ ಪ್ರತಿಯೊಂದು ಬಿದಿರು ನಾಶಹೊಂದುವುದು. ಬಿದಿರಿನ ಬೀಜವನ್ನು ನಾವು ಬಿದಿರಕ್ಕಿ ಎಂಬುದಾಗಿ ಕರೆಯುವೆವು. ಔಷಧೀಯ ಗುಣವಿರುವ ಬಿದಿರಕ್ಕಿಯನ್ನು ಆಹಾರವಾಗಿಯೂ ಉಪಯೋಗಿಸುವರು.

## ನಸುನಗುವ ಹೂಗಳು




ನಿಮ್ಮ ಮನೆಯಲ್ಲಿ ಹೂದೋಟವಿಲ್ಲವೆ?

ಯಾವೆಲ್ಲಾ ವಿಧದ ಗಿಡಗಳು ನಿಮ್ಮ ಹೂದೋಟದಲ್ಲಿ ಇವೆ?


ಅವುಗಳಲ್ಲಿ ಯಾವುದರಲ್ಲೆಲ್ಲ ಹೂಗಳು ಅರಳುತ್ತವೆ?

ನೀವು ಇಷ್ಟಪಡುವ ಹೂ ಯಾವುದು?

ಅದರ ಚಿತ್ರವನ್ನು ಮಾಡಿ ನೋಡಿರಿ.



ಕೆಳಗಿನ ಚಿತ್ರದಲ್ಲಿ ಕಾಣುವ ಹೂಗಳು ಯಾವುವು?
ಹೂಗಳಿಗೆ ಸರಿಹೊಂದುವ ಬಣ್ಣಗಳನ್ನು ನೀಡಿ ಚಿತ್ರವನ್ನು ಆಕರ್ಷಕಗೊಳಿಸಿರಿ.



ಎಷ್ಟು ಹೂಗಳ ಹೆಸರು ನಿಮಗೆ ತಿಳಿದಿದೆ? ಬರೆಯಿರಿ.

ಗುಲಾಬಿ ಹೂವಿಗೆ ಯಾವ ಬಣ್ಣವನ್ನು ನೀಡಿರುವಿರಿ? ಎಲ್ಲರು ಒಂದೇ ಬಣ್ಣವನ್ನು ನೀಡಿರುವಿರಾ?


ಬೇರೆ ಬೇರೆ ಬಣ್ಣಗಳನ್ನು ನೀಡಿರುವಿರೇ? ಯಾಕೆ?

ಎಲ್ಲಾ ದಾಸವಾಳ ಗಿಡಗಳಲ್ಲಿ ಒಂದೇ ಬಣ್ಣದ ಹೂಗಳು ಕಂಡುಬರುವುದೆ?

ತುಂಬೆ ಮತ್ತು ಮಲ್ಲಿಗೆಯ ಹಾಗೆ ಒಂದೇ ಬಣ್ಣವಿರುವ ಹೂಗಳನ್ನು ಮಾತ್ರ ಉತ್ಪಾದಿಸುವ ಸಸ್ಯಗಳನ್ನು ನೋಡಿರುವಿರಲ್ಲವೆ?

ಕೆಳಗಿನ ಪಟ್ಟಿಯಲ್ಲಿ ಇನ್ನೂ ಹೆಚ್ಚು ಹೂಗಳ ಹೆಸರುಗಳನ್ನು ಸೇರಿಸಿರಿ.

| ವಿವಿಧ ಬಣ್ಣಗಳಲ್ಲಿ ಕಂಡು ಬರುವ ಹೂಗಳು | ಒಂದೇ ಬಣ್ಣದಲ್ಲಿ ಮಾತ್ರ ಕಂಡು ಬರುವ ಹೂಗಳು |
|---|---|
| • ದಾಸವಾಳ | • ತುಂಬೆ |
| • ಗುಲಾಬಿ | • ಮಲ್ಲಿಗೆ |
| • | • |
| • | • |




ಗುಲಾಬಿ, ಮಲ್ಲಿಗೆ, ದಾಸವಾಳ, ಚೆಂಡುಹೂ ಮೊದಲಾದ ಹೂಗಳನ್ನು ಮೂಸಿ ನೋಡಿರಿ.

ಬಣ್ಣಗಳ ಹಾಗೆಯೇ ಹೂಗಳಿಗೆ ಪರಿಮಳದಲ್ಲೂ ವ್ಯತ್ಯಾಸವಿದೆ.

ಎಷ್ಟು ಗಿಡಗಳನ್ನು ಅವುಗಳ ಹೂವಿನ ಪರಿಮಳದಿಂದ ಮಾತ್ರ ನಿಮಗೆ ಪತ್ತೆಹಚ್ಚಬಹುದು? ಬರೆಯಿರಿ.

- •
- •
- •
- •

## ನಾನು ಯಾರೆಂದು ತಿಳಿದಿರುವಿರಾ?

ಕಣ್ಣುಮುಚ್ಚಾಲೆ ಆಟ ನಿಮಗೆ ಇಷ್ಟವಲ್ಲವೆ?

ಗುಲಾಬಿ, ಮಲ್ಲಿಗೆ, ಸೇವಂತಿಗೆ, ದಾಸವಾಳ, ಚೆಂಡುಹೂ ಮುಂತಾದ ಪರಿಮಳದ ಹೂಗಳನ್ನು ಸಂಗ್ರಹಿಸಿರಿ. ನಿಮ್ಮ ಸ್ನೇಹಿತನ ಕಣ್ಣಿಗೆ ಬಟ್ಟೆ ಕಟ್ಟಿದ ನಂತರ ಪ್ರತಿಯೊಂದು ಹೂವನ್ನು ಅವನಿಗೆ ಮೂಸಲು ನೀಡಿರಿ. ಸ್ನೇಹಿತನಿಗೆ ಎಷ್ಟು ಹೂಗಳನ್ನು ಪರಿಮಳದಿಂದ ಪತ್ತೆಹಚ್ಚಲು ಸಾಧ್ಯವಾಯಿತು?

## ರಾತ್ರಿಯಲ್ಲಿ ಅರಳುವವರು


ರಾತ್ರಿರಾಣಿ

ರಾತ್ರಿಯಲ್ಲಿ ಅರಳುವ ಹೂಗಳಿಗೆ ಬಿಳಿ ಬಣ್ಣ ಮತ್ತು ಸುವಾಸನೆ ಇರುವುದು.
ಚಿಟ್ಟೆಗಳಿಗೆ ರಾತ್ರಿ ಸಮಯಗಳಲ್ಲಿ ಹೂಗಳನ್ನು ಪತ್ತೆಹಚ್ಚಲು ಇದು ಸಹಾಯ ಮಾಡುವುದು.

## ನೀಲ ಕುರಿಂಜಿ ಅರಳಿದಾಗ

ಹನ್ನೆರಡು ವರ್ಷಗಳಿಗೊಮ್ಮೆ ಮಾತ್ರ ಅರಳುವ ಹೂವೇ ನೀಲಕುರಿಂಜಿ. ನೀಲಗಿರಿ ಬೆಟ್ಟಗಳಲ್ಲಿ ಕುರಿಂಜಿ ಅರಳಿ ನಿಂತಿರುವುದು ನೋಡಲೇಬೇಕಾದ ದೃಶ್ಯ!




## ಹೂಗಳ ದೈತ್ಯ



ರಫ್ಲೇಷಿಯ ಎಂಬುದು ವಿಶ್ವದ ಅತಿದೊಡ್ಡ ಹೂ. ಇದಕ್ಕೆ ಸಾಮಾನ್ಯ ಹತ್ತು ಕಿಲೋಗ್ರಾಂ ಭಾರ ಮತ್ತು ಒಂದು ಕೊಡೆಯಷ್ಟು ವಿಸ್ತೀರ್ಣ ಇರುವುದು. ಇದು ದುರ್ವಾಸನೆ ಯಿಂದ ಕೂಡಿದೆ.

## ಹೂಗಳನ್ನು ತಯಾರಿಸಬಹುದು

ಕಾಗದದಿಂದ ಹೂಗಳನ್ನು ತಯಾರಿಸುವ ವಿವಿಧ ಹಂತ ಗಳನ್ನು ಕೆಳಗೆ ಕೊಡಲಾಗಿದೆ. ನೀವೂ ಪ್ರಯತ್ನಿಸಿ ನೋಡಿರಿ.



ಎಲ್ಲಾ ಸಸ್ಯಗಳು ಹೂ ಬಿಡುವವುಗಳೇ ಎಂಬುದನ್ನು ಪರೀಕ್ಷಿಸಿ ನೋಡಿರಿ.



ವಿಭಿನ್ನ ಬಣ್ಣ, ವಾಸನೆ ಮತ್ತು ಗಾತ್ರವಿರುವ ಹೂಗಳಿವೆ.
ವಾಸನೆಯಿಂದ ಹೂಗಳನ್ನು ಪತ್ತೆಹಚ್ಚಬಹುದು.
ಕುತೂಹಲಕರವಾದ ಅನೇಕ ಹೂಗಳು ಪ್ರಕೃತಿಯಲ್ಲಿವೆ.

## ಎಲೆಗಳು ಹಲವು ವಿಧ

ಹೂಗಳ ವಾಸನೆಯನ್ನು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಿದೆಯಲ್ಲವೆ?

ಆದರೆ ಎಲೆಗಳದ್ದೊ?

ನಿಮಗೆ ಯಾವೆಲ್ಲ ಎಲೆಗಳ ವಾಸನೆ ತಿಳಿದಿದೆ?

ಬೇರೆ ಬೇರೆ ಸಸ್ಯಗಳ ಎಲೆಗಳನ್ನು ಮೂಸಿ ನೋಡಿರಿ.

ವಾಸನೆಯನ್ನು ಪ್ರತ್ಯೇಕಿಸಿ ತಿಳಿಯಲು ಸಾಧ್ಯವಿದೆಯೆ?

ತುಳಸಿ, ಮಾವು, ಬೇವುಸೊಪ್ಪು, ಲಿಂಬೆ, ದಾಲ್ಚೀನಿ, ಶುಂಠಿ, ಲಾವಂಚ, ಹಾಗಲ, ಗೇರು, ಸಾಂಬ್ರಾಣಿ ಮುಂತಾದ ನಿಮ್ಮ ಪ್ರದೇಶದಲ್ಲಿರುವ ಸಸ್ಯಗಳ ಎಲೆಗಳ ವಾಸನೆಯನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆಯೆ?

ಪ್ರತಿಯೊಂದು ಸಸ್ಯದ ಎಲೆಗಳ ವಾಸನೆ ಭಿನ್ನವಾಗಿದೆಯಲ್ಲವೆ?

## ಎಲೆಯ ಚಿತ್ರಗಳು

ಎಲೆಯು ಸಸ್ಯದ ಅತಿ ಪ್ರಧಾನ ಭಾಗವಾಗಿದೆ. ನೀವು ಪ್ರತಿಯೊಬ್ಬರು ಒಂದೊಂದು ಎಲೆಯನ್ನು ಕಿತ್ತು ತೆಗೆಯುತ್ತೀರಿ ಎಂದು ಭಾವಿಸಿರಿ. ಅದೆಷ್ಟು ಎಲೆಗಳು ಸಸ್ಯಕ್ಕೆ ನಷ್ಟವಾಗುವುದು! ಆದುದರಿಂದ ನಾವು ನೆಲದಲ್ಲಿ ಬಿದ್ದ ಎಲೆಗಳನ್ನು ಸಂಗ್ರಹಿಸಿ ಚಟುವಟಿಕೆಗಳನ್ನು ಮಾಡೋಣ. ನಾಲ್ಕೋ ಐದೋ ವಿಭಿನ್ನ ತರದ ಸಸ್ಯಗಳ ಎಲೆಗಳನ್ನು ಸಂಗ್ರಹಿಸಿರಿ. ನೀವು ಸಂಗ್ರಹಿಸಿದ ಎಲೆಗಳ ಆಕಾರ ಒಂದೇ ರೀತಿಯಾಗಿದೆಯೆ? ಮಾವಿನ ಎಲೆಯನ್ನು ಮತ್ತು ಹಲಸಿನ ಎಲೆಯನ್ನು ಹೋಲಿಸಿ ನೋಡಿರಿ. ಆಕಾರದಲ್ಲಿ ಯಾವ ವ್ಯತ್ಯಾಸವಿದೆ?

ಒಂದಕ್ಕಿಂತ ಹೆಚ್ಚು ಮಾವಿನ ಮರಗಳಿಂದ ಬಿದ್ದ ಎಲೆಗಳನ್ನು ಸಂಗ್ರಹಿಸಿರಿ.

ಅವುಗಳಿಗೆಲ್ಲ ಒಂದೇ ಆಕಾರವಿದೆಯಲ್ಲವೇ?



ಎಲೆಗಳ ಚಿತ್ರಗಳಿಗೆ ಬಣ್ಣವನ್ನು ನೀಡಿ ಅಂದಗೊಳಿಸಿರಿ.



ಎಲೆಗಳ ಆಕಾರವನ್ನು ನೋಡಿ ಸಸ್ಯಗಳನ್ನು ಪತ್ತೆಹಚ್ಚಬಹುದು. ವಿವಿಧ ತರದ ಸಸ್ಯಗಳ ಎಲೆಗಳ ಆಕೃತಿ ವಿಭಿನ್ನವಾಗಿದೆ. ಎಲೆಗಳ ವಾಸನೆಯಿಂದಲೂ ಸಸ್ಯಗಳನ್ನು ಪತ್ತೆಹಚ್ಚಬಹುದು.

## ಜೀವವಿರುವವುಗಳು



ಚಿತ್ರದಲ್ಲಿರುವ ವಸ್ತುಗಳು ಯಾವುವು?

ಚಿತ್ರದಿಂದ ಜೀವವಿರುವವುಗಳು ಮತ್ತು ಜೀವ ಇಲ್ಲದವುಗಳನ್ನು ಕಂಡುಹಿಡಿಯಿರಿ.

ನಿಮ್ಮ ಪರಿಸರವನ್ನು ವೀಕ್ಷಿಸಿ ಜೀವವಿರುವವುಗಳು ಮತ್ತು ಜೀವ ಇಲ್ಲದವುಗಳನ್ನು ಕಂಡುಹಿಡಿದು ಪಟ್ಟಿ ಮಾಡಿರಿ.

| ಜೀವವಿರುವವುಗಳು | ಜೀವ ಇಲ್ಲದವುಗಳು |
|---|---|
| | |

ಜೀವ ಇರುವವುಗಳ ಮತ್ತು ಜೀವ ಇಲ್ಲದವುಗಳ ಯಾವೆಲ್ಲ ವೈಶಿಷ್ಟ್ಯಗಳನ್ನು ನೀವು ತಿಳಿದಿರುವಿರಿ?

ಕೆಳಗೆ ಕಾಣುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಜೀವವಿರುವವುಗಳ ವೈಶಿಷ್ಟ್ಯಗಳು | ಜೀವ ಇಲ್ಲದವುಗಳ ವೈಶಿಷ್ಟ್ಯಗಳು |
|---|---|
| • ಬೆಳೆಯುತ್ತವೆ | • |
| • ಹೊಸತನ್ನು ಉತ್ಪಾದಿಸುವುದು | • |
| • | • ಚಲಿಸುವುದಿಲ್ಲ |
| • | • ಪ್ರತಿಕ್ರಿಯಿಸುವುದಿಲ್ಲ |
| • | • ಆಹಾರ ಸೇವಿಸುವುದಿಲ್ಲ |
| • | • |

ಜೀವವಿರುವವುಗಳೆಲ್ಲ ಬೆಳೆಯುತ್ತವೆ. ಅವುಗಳ ಬೆಳವಣಿಗೆಗೆ ಆಹಾರ ಅತಿ ಅಗತ್ಯವಾಗಿದೆ. ನಮ್ಮ ಬೆಳವಣಿಗೆಗೆ ಆಹಾರವು ಮುಖ್ಯ ಕಾರಣವಲ್ಲವೆ? ಅದೇ ರೀತಿಯಲ್ಲಿ ಸಸ್ಯಗಳ ಬೆಳವಣಿಗೆಗೂ ಆಹಾರದ ಅಗತ್ಯವಿದೆ.

ನಮ್ಮ ಮನೆಯಲ್ಲಿ ಆಹಾರ ತಯಾರಿಸುವುದು ಅಡುಗೆ ಕೋಣೆಯಲ್ಲಿ ಅಲ್ಲವೆ? ಸಸ್ಯಗಳಿಗೆ ಅಗತ್ಯವಾದ ಆಹಾರವು ತಯಾರಿಸಲ್ಪಡುವುದು ಎಲೆಗಳಲ್ಲಾಗಿದೆ. ತಯಾರಿಸಲ್ಪಟ್ಟ ಆಹಾರವು ಸಸ್ಯಗಳ ಬೆಳವಣಿಗೆಗೆ ಉಪಯೋಗಿಸಲ್ಪಡುವುದು. ಉಳಿದ ಆಹಾರವನ್ನು ಸಸ್ಯಗಳು ವಿವಿಧ ಭಾಗಗಳಲ್ಲಿ ಸಂಗ್ರಹಿಸುವುದು. ಅದನ್ನು ನಾವು ಆಹಾರಕ್ಕಾಗಿ ಉಪಯೋಗಿಸುತ್ತೇವೆ.

ನಾವು ಆಹಾರಕ್ಕಾಗಿ ಉಪಯೋಗಿಸುವ ಕೆಲವು ಸಸ್ಯಗಳ ಚಿತ್ರಗಳನ್ನು ನೋಡಿರಿ. ಪ್ರತಿಯೊಂದರ ಹೆಸರನ್ನು ಪಟ್ಟಿಯಿಂದ ಪತ್ತೆ ಹಚ್ಚಿ ಬರೆಯಿರಿ.





ಗೋಧಿ













ಭತ್ತ
ಪಪ್ಪಾಯಿ
ಪೇರಳೆ
ಕೇರೆಟ್
ಬೀಟ್‌ರೂಟ್
ಮರಗೆಣಸು
ಮೂಲಂಗಿ

ಆಹಾರಕ್ಕಾಗಿ ನಾವು ಉಪಯೋಗಿಸುವ ಸಸ್ಯಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿರಿ.

ನುಗ್ಗೆಯ ಎಲೆ, ಹೂ ಮತ್ತು ಕೋಡುಗಳನ್ನು ನಾವು ಆಹಾರಕ್ಕಾಗಿ ಉಪಯೋಗಿಸುತ್ತೇವೆ. ಎಲ್ಲಾ ಸಸ್ಯಗಳ ಎಲ್ಲಾ ಭಾಗಗಳನ್ನು ನಾವು ಆಹಾರಕ್ಕಾಗಿ ಉಪಯೋಗಿಸುತ್ತೇವೆಯೇ? ಕೆಳಗಿನ ಪಟ್ಟಿಯನ್ನು ಭರ್ತಿಗೊಳಿಸಿರಿ.

| ಹೂ | ಕಾಯಿ | ಎಲೆ | ಕಾಂಡ | ಗಡ್ಡೆ |
|---|---|---|---|---|
| ನೀರುಳ್ಳಿ | ಪಪ್ಪಾಯಿ | ಹರಿವೆ | ಹರಿವೆ | ಮರಗೆಣಸು |
| ನುಗ್ಗೆ | ಚೀನಿಕಾಯಿ | ತಗತೆ | ಕೆಸು | ಗೆಣಸು |
| • | • | • | • | • |

## ಬಿತ್ತಿದರೆ ಮೊಳಕೆ ಬರುವುದು

ಸಸ್ಯಗಳು ಮೊಳೆತು ಬರುವುದನ್ನು ನೋಡಿರುವಿರಲ್ಲವೆ?

ಮಾವಿನಬೀಜ, ತೆಂಗಿನಕಾಯಿ ಎಂಬಿವುಗಳು ಮೊಳಕೆ ಬರುವುದನ್ನು ಕಂಡಿರುವಿರಲ್ಲವೇ?

ಬೀಜ ಮೊಳಕೆ ಬಂದು ಹೊಸ ಸಸ್ಯ ಉಂಟಾಗುವುದು.

ನಾವು ಬೀಜವನ್ನು ಮೊಳಕೆ ಬರಿಸಿ ನೋಡೋಣ.

ಒಂದು ಹೂಕುಂಡದಲ್ಲಿ ಮಣ್ಣನ್ನು ತುಂಬಿಸಿರಿ. ಮಣ್ಣನ್ನು ಒದ್ದೆ ಮಾಡಿರಿ. ಕೆಲವು ಅಲಸಂಡೆ ಬೀಜಗಳನ್ನು ಈ ಮಣ್ಣಿನಲ್ಲಿ ಸ್ವಲ್ಪ ಆಳದಲ್ಲಿ ಹಾಕಿರಿ. ಕೆಲವು ದಿನಗಳಲ್ಲಿ ಸಸಿ ಮೊಳೆತು ಬರುವುದನ್ನು ನೋಡಿರಿ. ಯಾವೆಲ್ಲ ಬದಲಾವಣೆಗಳನ್ನು ಕಾಣಲು ಸಾಧ್ಯವಿದೆ?



ಅಲಸಂಡೆ ಬೀಜ ಮೊಳಕೆ ಬರುವ ಹಂತಗಳನ್ನು ಚಿತ್ರಿಸಿರುವುದನ್ನು ನೋಡಿರಿ.




ಹೂಕುಂಡದಲ್ಲಿ ನೀವು ಬಿತ್ತಿದ ಅಲಸಂಡೆ ಸಸ್ಯದ ಬೇರನ್ನು ನೋಡಲು ಸಾಧ್ಯವಿಲ್ಲವಲ್ಲವೇ? ಬೇರು ಬೆಳೆಯುವುದನ್ನು ನೋಡಲು ನಾವು ಒಂದು ಪ್ರಯೋಗವನ್ನು ಮಾಡಿನೋಡೋಣ.

## ಬೇರನ್ನು ನೋಡಲು

ಒಂದು ಗಾಜಿನ ಲೋಟದಲ್ಲಿ ಒದ್ದೆ ಹತ್ತಿ ತುಂಬಿಸಿರಿ. ಮೂರೋ ನಾಲ್ಕೋ ಅಲಸಂಡೆ ಬೀಜಗಳನ್ನು ಅದರೊಳಗೆ ಹಾಕಿರಿ. ದಿನನಿತ್ಯ ಅದನ್ನು ವೀಕ್ಷಿಸಿರಿ. ಹತ್ತಿಯನ್ನು ಪ್ರತಿದಿನ ಒದ್ದೆಗೊಳಿಸಲು ಮರೆಯಬಾರದು. ಪ್ರತಿ ದಿವಸ ಬೀಜಗಳಿಗೆ ಉಂಟಾಗುವ ಬದಲಾವಣೆಗಳನ್ನು ವೀಕ್ಷಿಸಿ ಪರಿಸರ ಪುಸ್ತಕದಲ್ಲಿ ಬರೆಯಿರಿ.

ಬೀಜ ಮೊಳಕೆ ಬರುವುದು. ಅದು ಬೆಳೆದು ಎಲೆ, ಹೂ ಮತ್ತು ಕಾಯಿಗಳು ಉಂಟಾಗುವುದು. ಕಾಯಿಯ ಒಳಗಿನ ಬೀಜದಿಂದ ಪುನಃ ಹೊಸ ಸಸ್ಯ ಉಂಟಾಗುವುದು.

ಬೀಜದಿಂದ ಸಸ್ಯ, ಸಸ್ಯದಿಂದ ಬೀಜವು ಉಂಟಾಗುವ ಚಿತ್ರವನ್ನು ನೋಡಿರಿ.



ಬೀಜದ ಪ್ರಾಧಾನ್ಯ ತಿಳಿಯಿತಲ್ಲವೇ?
ಅತಿ ಹೆಚ್ಚು ಮಹತ್ವವಿರುವ ಬೀಜವನ್ನು ಸರಿಯಾಗಿ ಸಂರಕ್ಷಿಸಬೇಡವೇ?
ಸಸ್ಯಗಳು ಬೀಜಗಳನ್ನು ಹೇಗೆ ಸಂರಕ್ಷಿಸುವುದೆಂದು ನೋಡಿರಿ.



ಒಂದೇ ಬೀಜ ಇರುವ ಮತ್ತು ಒಂದಕ್ಕಿಂತ ಹೆಚ್ಚು ಬೀಜಗಳಿರುವ ಕಾಯಿಗಳಿವೆ.

ನೀವು ನೋಡಿರುವ ಅತಿ ಸಣ್ಣ ಬೀಜ ಯಾವುದು? ಅತಿ ದೊಡ್ಡ ಬೀಜ ಯಾವುದು?

ನಾವು ಆಹಾರಕ್ಕೆ ಉಪಯೋಗಿಸುವ ಹಣ್ಣುಗಳ ಮತ್ತು ಹಸುರು ತರಕಾರಿಗಳ ಬೀಜಗಳನ್ನು ವೀಕ್ಷಿಸಿರಿ.




ಅಲಸಂಡೆ ಬೀಜ ಮೊಳಕೆ ಬರುವುದನ್ನು ನೀವು ನೋಡಿದಿರಲ್ಲವೆ?
ಮೊದಲು ಮೊಳಕೆ ಬರುವುದು ಎಲೆಯೋ ಬೇರೋ?
ಸಸ್ಯಗಳಲ್ಲಿ ಬೇರಿನ ಅಗತ್ಯವೇನೆಂದು ನಿಮಗೆ ತಿಳಿದಿದೆಯೇ?
ಬೇರು ಸಸ್ಯಗಳಿಗೆ ಹೇಗೆ ಸಹಾಯ ಮಾಡುವುದು ಎಂಬುದನ್ನು ತಿಳಿಯಬೇಡವೆ? ಒಂದು ಸರಳ ಪ್ರಯೋಗವನ್ನು ಮಾಡಿ ನೋಡೋಣ.

ಒಂದು ನೀರುಕಡ್ಡಿ ಗಿಡವನ್ನು ಬೇರು ಸಹಿತ ಕಿತ್ತು ತೆಗೆಯಿರಿ. ನೀರುಕಡ್ಡಿ ಗಿಡದ ಬೇರಿನ ಭಾಗವನ್ನು ನೀರಿನಲ್ಲಿ ತೊಳೆಯಿರಿ. ನೀರುಕಡ್ಡಿಯ ದಂಟಿನ ಬಣ್ಣವನ್ನು ಬರೆದಿಡಿರಿ.




ಒಂದು ಗಾಜಿನ ಪಾತ್ರೆಯಲ್ಲಿ ಸ್ವಲ್ಪ ನೀರನ್ನು ತೆಗೆದುಕೊಳ್ಳಿರಿ. ಈ ನೀರಿಗೆ ಸ್ವಲ್ಪ ಕೆಂಪು ಶಾಯಿಯನ್ನು ಹಾಕಿ ಕದಡಿರಿ. ಬೇರು ಸಹಿತ ಕಿತ್ತು ತೆಗೆದ ನೀರುಕಡ್ಡಿಯ ಗಿಡವನ್ನು ಹತ್ತು ನಿಮಿಷದ ನಂತರ ಶಾಯಿಯ ನೀರಿನಲ್ಲಿ ಇರಿಸಿರಿ. ಸೂರ್ಯಪ್ರಕಾಶವಿರುವ ಸ್ಥಳದಲ್ಲಿ ಸ್ವಲ್ಪ ಸಮಯ ಇದನ್ನು ಇರಿಸಿರಿ. ಯಾವ ಬದಲಾವಣೆಯನ್ನು ನೀವು ಕಾಣುವಿರಿ? ದಂಟಿಗೆ ಬಣ್ಣ ಬದಲಾವಣೆ ಉಂಟಾಗಿದೆಯೇ? ಹೀಗಾಗಲು ಕಾರಣವೇನು?




ಪ್ರಯೋಗದ ಟಿಪ್ಪಣಿಯನ್ನು ಪರಿಸರ ಪುಸ್ತಕದಲ್ಲಿ ಬರೆಯಿರಿ.

## ಬೇರು ಹೇಳುವುದನ್ನು ಗಮನಿಸಿರಿ



ಗಿಡವನ್ನು ಮಣ್ಣಿನಲ್ಲಿ ಗಟ್ಟಿಯಾಗಿ ಇರಿಸುವುದು ನಾನು. ಗಿಡಗಳಿಗೆ ಅಗತ್ಯವಾದ ನೀರು ಮತ್ತು ಗೊಬ್ಬರಗಳನ್ನು ಮಣ್ಣಿನಿಂದ ಹೀರಲು ನಾನು ಸಹಾಯ ಮಾಡುತ್ತೇನೆ.

ಮಳೆನೀರು ಮಣ್ಣಿನಡಿಗೆ ಇಂಗುವುದಕ್ಕೂ ಮಣ್ಣು ಕರಗಿ ಹೋಗದಿರುವುದಕ್ಕೂ ನನ್ನ ಸಹಾಯ ಬೇಕು.





### ಬೇರುಗಳು

ಕುರುಂದೋಟಿ, ಲಾವಂಚ ಇತ್ಯಾದಿ ಅನೇಕ ಸಸ್ಯಗಳ ಬೇರುಗಳನ್ನು ಔಷಧಿಗಾಗಿ ಉಪಯೋಗಿಸುವರು. ಸಾಗುವಾನಿ, ಕಾಫಿ, ಬೀಟಿ ಮೊದಲಾದವುಗಳ ಬೇರುಗಳಿಂದ ಕೌತುಕವನ್ನುಂಟು ಮಾಡುವ ವಸ್ತುಗಳನ್ನು ತಯಾರಿಸಲಾಗುವುದು. ಮರಗೆಣಸು, ಗೆಣಸು ಮುಂತಾದ ಸಸ್ಯಗಳ ಬೇರುಗಳನ್ನು ಆಹಾರಕ್ಕಾಗಿ ಉಪಯೋಗಿಸುವರು.

## ಗಿಡ ಮತ್ತು ಕಾಂಡ



ಚಿತ್ರವನ್ನು ನೋಡಿದಿರಲ್ಲವೆ? ಈ ಚಿತ್ರದಲ್ಲಿರುವ ಗಿಡಕ್ಕೆ ಯಾವ ಭಾಗ ಇಲ್ಲ? ಆ ಭಾಗವನ್ನು ಚಿತ್ರಿಸಿರಿ.

ನೀರುಕಡ್ಡಿಯ ಬೇರು ಹೀರಿದ ನೀರನ್ನು ಸಸ್ಯದ ಎಲ್ಲಾ ಭಾಗಗಳಿಗೂ ತಲುಪಿಸುವುದು ಅದರ ಕಾಂಡವಾಗಿದೆ. ಕಾಂಡ ಇಲ್ಲದ ಒಂದು ಗಿಡದ ಸ್ಥಿತಿಯನ್ನು ಒಮ್ಮೆ ಆಲೋಚಿಸಿ ನೋಡಿರಿ.

### ಕಾಂಡಕ್ಕೂ ಹೇಳುವುದಕ್ಕಿದೆ



ಬೇರು ಹೀರಿದ ನೀರು ಮತ್ತು ಗೊಬ್ಬರಗಳನ್ನು ಎಲೆಗಳಿಗೆ ತಲುಪಿಸುವುದು ನಾನು. ಗಿಡಗಳಲ್ಲಿ ಎಲೆಗಳು ಕ್ರಮೀಕರಿಸಲ್ಪಟ್ಟಿರುವುದನ್ನು ನೀವು ನೋಡಿದ್ದೀರಲ್ಲವೆ? ನಾನು ಇಲ್ಲದಿದ್ದರೆ ಎಲೆಗಳಿಗೆ ನಿಲ್ಲಲು ಸಾಧ್ಯವಿಲ್ಲ.






### ಸಿಹಿಯಾದ ಕಾಂಡಗಳು

ಕಬ್ಬಿನ ದಂಟನ್ನು ಇಷ್ಟಪಡದ ಸ್ನೇಹಿತರಿದ್ದಾರೆಯೇ? ಕಬ್ಬಿನ ದಂಟಿನಿಂದ ಸಕ್ಕರೆಯನ್ನು ತಯಾರಿಸುವರೆಂದು ನಿಮಗೆ ತಿಳಿದಿದೆಯೇ?

ಸಸ್ಯಗಳ ವಿವಿಧ ಭಾಗಗಳು ನಿಮಗೆ ತಿಳಿಯಿತಲ್ಲವೇ? ಕೆಳಗೆ ನೀಡಿದ ಸಸ್ಯದ ಚಿತ್ರವನ್ನು ನೋಡಿ ಅದರ ಭಾಗಗಳ ಹೆಸರುಗಳನ್ನು ಕೋಣೆಗಳಲ್ಲಿ ಬರೆಯಿರಿ.



## ಊರಮಾವುಗಳು ಕಣ್ಮರೆಯಾಗುತ್ತಿವೆ

ಸಿಹಿಯಾದ ಮಾವಿನ ಹಣ್ಣಿನೊಂದಿಗೆ ಮಕ್ಕಳನ್ನು ಕಾಯುತ್ತಿರುವ ಅಜ್ಜಿಮಾವು.

ಕಾಗಕ್ಕನಿಗೆ, ಅಳಿಲಣ್ಣನಿಗೆ, ಪುಟಾಣಿ ಇರುವೆಗೆ ನೆರಳನ್ನು ನೀಡುವ ಜೇನುಮಾವು.

ಅನೇಕ ಜೀವಿಗಳಿಗೆ ಆಶ್ರಯತಾಣವಾಗಿರುವ ಅದೆಷ್ಟೊ ಊರ ಮಾವಿನ ಮರಗಳು! ಇವುಗಳಲ್ಲಿ ಹೆಚ್ಚಿನವುಗಳು ನಮಗೆ ನಷ್ಟವಾಗುತ್ತಿವೆ.

ಮಾವಿನ ಮರಗಳು ಮಾತ್ರವಲ್ಲ, ಇತರ ಅನೇಕ ಮರಗಳು ನಮ್ಮೂರಿನಿಂದ ಕಣ್ಮರೆಯಾಗುತ್ತಿವೆ.


ಇವುಗಳನ್ನು ಸಂರಕ್ಷಿಸಬೇಕಾದುದು ನಮ್ಮ ಕರ್ತವ್ಯವಲ್ಲವೇ?

ನಾವು ಗಿಡಗಳನ್ನು ನೆಟ್ಟು ಬೆಳೆಸುವ.

ಮಣ್ಣಿನಿಂದ ತಲೆಯೆತ್ತಿ ಮೊಳೆತು ಬರುವ ಪ್ರತಿಯೊಂದು ಪುಟಾಣಿ ಸಸ್ಯವನ್ನು ಸ್ವಾಗತಿಸೋಣ.

### ಕಳ್ಳಿ ಗಿಡ

ಕಾಂಡ ಎಲೆಯಾಗಿ ರೂಪಾಂತರಗೊಂಡ ಸಸ್ಯಗಳನ್ನು ನೋಡಿರುವಿರಾ? ನೀರು ಕಡಿಮೆ ಇರುವ ಪ್ರದೇಶಗಳಲ್ಲಿ ಇದಕ್ಕೆ ಬೆಳೆಯಲು ಸಾಧ್ಯವಿದೆ. ಎಲೆಯ ಕಾರ್ಯವನ್ನು ಕಾಂಡವೇ ನಿರ್ವಹಿಸುವುದು.








## ಕಲಿಕೆಯ ಪ್ರಧಾನ ಸಾಧನೆಗಳು

- ವೈಶಿಷ್ಟ್ಯಗಳಿಗನುಸಾರವಾಗಿ ಸಸ್ಯಗಳನ್ನು ವಿವಿಧ ವಿಭಾಗಗಳಾಗಿ ವರ್ಗೀಕರಿಸಲು ಸಾಧ್ಯವಿದೆ.
- ಸಸ್ಯದ ಭಾಗಗಳನ್ನು ವೀಕ್ಷಿಸಿ ಕೆಲವು ಸಸ್ಯಗಳನ್ನು ಹೆಸರಿಸಲು ಸಾಧ್ಯವಾಗುವುದು.
- ಬೇರು, ಕಾಂಡ, ಕಾಯಿ ಎಂಬಿವುಗಳ ಕಾರ್ಯಗಳನ್ನು ಪ್ರತ್ಯೇಕಿಸಿ ತಿಳಿದು ವಿವರಿಸಲು ಸಾಧ್ಯವಾಗುವುದು.
- ಜೀವವಿರುವ ಮತ್ತು ಜೀವ ಇಲ್ಲದವುಗಳನ್ನು ಪ್ರಕೃತಿಯಿಂದ ಕಂಡುಹಿಡಿದು ಪಟ್ಟಿಯನ್ನು ತಯಾರಿಸಲು ಮತ್ತು ಅವುಗಳ ವೈಶಿಷ್ಟ್ಯಗಳನ್ನು ಹೇಳಲು ಸಾಧ್ಯವಾಗುವುದು .
- ಸಸ್ಯದ ಯಾವೆಲ್ಲ ಭಾಗಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆಂದು ಕಂಡುಹಿಡಿದು ಪಟ್ಟಿಮಾಡಲು ಸಾಧ್ಯವಿದೆ.
- ಸಸ್ಯದ ಭಾಗಗಳನ್ನು ಚಿತ್ರಿಸಲು ಸಾಧ್ಯವಾಗುವುದು.
- ಸಸ್ಯಗಳನ್ನು ಸಂರಕ್ಷಿಸಬೇಕಾದ ಮಹತ್ವವನ್ನು ತಿಳಿದು ಸಂರಕ್ಷಣಾ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು.

## ಮೌಲ್ಯಮಾಪನ ಮಾಡೋಣ

1. ಸಸ್ಯದ 'ಅಡುಗೆಕೋಣೆ' ಎಂದು ಕರೆಯಬಹುದಾದ ಭಾಗ

   A) ಬೇರು B) ಕಾಂಡ C) ಎಲೆ D) ಕಾಯಿ

2. ಕೆಳಗಿನವುಗಳಲ್ಲಿ ಸಸ್ಯ ಸಂರಕ್ಷಣೆಗೆ ಸಂಬಂಧಿಸದ ಸಂದೇಶ ಯಾವುದು?

   A) ಮರ ಒಂದು ವರ B) ಮರವನ್ನು ಕಡಿಯಬಾರದು

   C) ಮರಗಳು ಮನುಷ್ಯನಿಗಾಗಿ ಮಾತ್ರ

   D) ಮರಗಳು ನಮ್ಮ ಸ್ನೇಹಿತರು

3. ಸಸ್ಯ ಭಾಗಗಳಿಗೆ ಸಂಬಂಧಿಸಿ ಬರೆದಿರುವುದನ್ನು ನೋಡಿರಿ. ಬಿಟ್ಟು ಹೋದ ಭಾಗವನ್ನು ಹೊಂದಿಸಿ ಸೇರಿಸಬಹುದೆ?

| | |
|---|---|
| ಕಾಯಿ | |
| | ಸಸ್ಯಗಳಿಗೆ ಅಗತ್ಯವಾದ ಆಹಾರವನ್ನು ತಯಾರಿಸುವುದು |
| ಕಾಂಡ | |
| | ಸಸ್ಯವನ್ನು ಮಣ್ಣಿನಲ್ಲಿ ಗಟ್ಟಿಯಾಗಿ ನಿಲ್ಲುವಂತೆ ಮಾಡುವುದು |



## ಮುಂದುವರಿದ ಚಟುವಟಿಕೆಗಳು

1. ಹತ್ತಿರದ ಒಂದು ಬಯಲು, ಬನ, ಕೊಳ, ಅರಣ್ಯ ಮುಂತಾದವುಗಳನ್ನು ಹಿರಿಯರೊಂದಿಗೆ ಸಂದರ್ಶಿಸಿರಿ. ಅವುಗಳಲ್ಲಿ ಯಾವೆಲ್ಲ ವಿಧದ ಸಸ್ಯಗಳಿವೆಯೆಂದು, ಅವುಗಳಿಂದ ಜೀವಿಗಳಿಗೆ ಮತ್ತು ಮನುಷ್ಯನಿಗೆ ಇರುವ ಪ್ರಯೋಜನಗಳು ಯಾವುವೆಂದು ಕಂಡುಹಿಡಿಯಿರಿ.
2. ಶಾಲೆಯ ಸುತ್ತುಮುತ್ತಲಿರುವ ಮರಗಳಿಗೆ ಮತ್ತು ಗಿಡಗಳಿಗೆ ಅವುಗಳ ಹೆಸರನ್ನು ಬರೆದ ಫಲಕಗಳನ್ನು ತೂಗು ಹಾಕಿರಿ.

## 2 ಇರುವೆಯಿಂದ ಆನೆಯ ವರೆಗೆ





ಕಿಟ್ಟು ಆನೆಯ ಬಾಲ್ಯಕಾಲ ಎಷ್ಟು ಖುಷಿಯಾಗಿತ್ತು ಅಲ್ಲವೇ!

ಕಿಟ್ಟು ಆನೆಯ ಸ್ನೇಹಿತರು ಯಾರೆಲ್ಲ ಆಗಿದ್ದರೆಂದು ಬರೆಯಿರಿ.

ನಮ್ಮ ಸುತ್ತಲೂ ಅದೆಷ್ಟು ಜೀವಿಗಳಿವೆ. ಅಲ್ಲವೇ?

ನಿಮ್ಮ ಸುತ್ತಮುತ್ತ ಯಾವೆಲ್ಲ ಜೀವಿಗಳನ್ನು ಕಾಣುತ್ತೀರಿ?

ನಿಮ್ಮ ಮನೆಯಲ್ಲೂ ಕೆಲವು ಜೀವಿಗಳನ್ನು ಸಾಕುತ್ತೀರಲ್ಲವೇ?


ನಾವು ಅವುಗಳನ್ನು ಸಾಕುವುದು ಯಾಕೆ?

ಬೇರೆ ಬೇರೆ ಅಗತ್ಯಗಳಿಗಾಗಿ ನಾವು ಆಹಾರವನ್ನೂ ವಸತಿಯನ್ನೂ ನೀಡಿ ಸಾಕುವ ಜೀವಿಗಳ ಪಟ್ಟಿ ಮಾಡಿರಿ.


| ಹಾಲಿಗಾಗಿ | ಮೊಟ್ಟೆಗಾಗಿ | ಮಾಂಸಕ್ಕಾಗಿ | ಹವ್ಯಾಸಕ್ಕಾಗಿ |
|---|---|---|---|
| | | | |
| | | | |
| | | | |
| | | | |
| | | | |

ನೀವು ಈ ಜೀವಿಗಳಿಗೆಲ್ಲಾ ಒಂದೇ ರೀತಿಯ ಆಹಾರವನ್ನು ನೀಡುವಿರಾ? ಅವುಗಳು ಯಾವುವು?


## ಕಾಗದದಿಂದೊಂದು ಹಕ್ಕಿ



ಜೀವಿಗಳ ಕೆಲವು ಅಕ್ಷರ ಚಿತ್ರಗಳನ್ನು ನೋಡಿರಿ. ಅಕ್ಷರಗಳನ್ನು ಉಪಯೋಗಿಸಿ ಪರಿಸರ ಪುಸ್ತಕದಲ್ಲಿ ಹೆಚ್ಚಿನ ಚಿತ್ರಗಳನ್ನು ರಚಿಸಿರಿ.



# ಕಾಡಿನಲ್ಲೊಂದು ಸಮ್ಮೇಳನ








ಮನುಷ್ಯರ ಹಸ್ತಕ್ಷೇಪದಿಂದ ಬದುಕಲು ಕಷ್ಟಪಡುತ್ತಿರುವ ಜೀವಿಗಳ ವ್ಯಥೆ ಕೇಳಿದಿರಲ್ಲವೇ? ಈ ರೀತಿಯ ದೌರ್ಜನ್ಯಕ್ಕೆದುರಾಗಿ ಕಾಡಿನ ಗೆಳೆಯರು ಪ್ರತಿಭಟಿಸಲು ತೀರ್ಮಾನಿಸಿದರು. ಇದಕ್ಕೆ ಸಂಬಂಧಿಸಿ ನಡೆದ ಸಮಾಲೋಚನಾ ಸಭೆಯಲ್ಲಿ ಅನೇಕ ಜೀವಿಗಳು ಭಾಗವಹಿಸಿದವು. ಭಾಗವಹಿಸಿದ ಎಲ್ಲರಿಗೂ ಆಹಾರವನ್ನು ತಯಾರಿಸಲಾಗಿತ್ತು. ಆಹಾರವನ್ನು ಎರಡು ಕಡೆಗಳಲ್ಲಾಗಿ ವ್ಯವಸ್ಥೆಗೊಳಿಸಲಾಗಿತ್ತು.

**ಕೌಂಟರ್ 1**




**ಕೌಂಟರ್ 2**



ಕೌಂಟರ್ 1 ರಿಂದ ಆಹಾರ ಸೇವಿಸಿದವರು ಯಾರೆಲ್ಲ?

- 
- 
- 
- 

ಕೌಂಟರ್ 2 ರಿಂದಲೋ?

- 
- 
- 
- 

ಆದರೆ ಕೆಲವು ಜಾಣರು ಎರಡೂ ಕೌಂಟರ್‌ಗಳಿಂದ ಆಹಾರ ತೆಗೆದುಕೊಂಡಿದ್ದರು. ಅವರು ಯಾರೆಲ್ಲಾ ಆಗಿರಬಹುದು?

- 
- 
- 
- 

ಎಲ್ಲಾ ಜೀವಿಗಳು ಸೇವಿಸುವ ಆಹಾರ ಒಂದೇ ಅಲ್ಲ ಎಂದು ತಿಳಿಯಿತಲ್ಲವೇ.

**ವಿಚಿತ್ರ ಜೀವಿ**

ಕಾಗದವೊಂದನ್ನು ಮೂರಾಗಿ ಮಡಚಿರಿ. ಮಡಚಿದ ಭಾಗದಲ್ಲಿ ಒಬ್ಬರು ಅವರಿಗಿಷ್ಟವಾದ ಜೀವಿಯ ತಲೆ ಮತ್ತು ಕುತ್ತಿಗೆಯನ್ನು ರಚಿಸಲಿ. ಚಿತ್ರ ರಚಿಸಿದ ಭಾಗವನ್ನು ಕೆಳಗೆ ಮಡಚಿ ನಂತರದ ಭಾಗದಲ್ಲಿ ಗೆಳೆಯನು ಅವನಿಗಿಷ್ಟವಾದ ಜೀವಿಯ ಹೊಟ್ಟೆಯನ್ನು ರಚಿಸಲಿ. ಕಾಗದವನ್ನು ಮಡಚಿ ಮತ್ತೋರ್ವ ಗೆಳೆಯನಲ್ಲಿ ಅವನಿಗಿಷ್ಟವಾದ ಜೀವಿಯ ಕಾಲುಗಳನ್ನು ಬಿಡಿಸಲು ಹೇಳಿರಿ.

ಇನ್ನು ಕಾಗದವನ್ನು ಬಿಡಿಸಿ ನೋಡಿರಿ. ಹೇಗಿದೆ ನೀವು ರಚಿಸಿದ ವಿಚಿತ್ರ ಜೀವಿ?



**ಆಹಾರ ರೀತಿಗನುಗುಣವಾಗಿ ಜೀವಿಗಳನ್ನು ಸಸ್ಯಾಹಾರಿಗಳು, ಮಾಂಸಾಹಾರಿಗಳು, ಮಿಶ್ರಾಹಾರಿಗಳು** ಎಂದು ವರ್ಗೀಕರಿಸಬಹುದು. ಸಸ್ಯಾಹಾರವನ್ನು ಮಾತ್ರ ಸೇವಿಸುವ ಜೀವಿಗಳನ್ನು ಸಸ್ಯಾಹಾರಿಗಳು ಎಂದೂ, ಮಾಂಸಾಹಾರವನ್ನು ಮಾತ್ರ ಸೇವಿಸುವ ಜೀವಿಗಳನ್ನು ಮಾಂಸಾಹಾರಿಗಳು ಎಂದೂ, ಎರಡೂ ವಿಧದ ಆಹಾರವನ್ನು ಸೇವಿಸುವ ಜೀವಿಗಳನ್ನು ಮಿಶ್ರಾಹಾರಿಗಳು ಎಂದೂ ಕರೆಯುತ್ತಾರೆ.


## ಕೊಳ್ಳೆ ಹಿಡಿಯುವ ತಂತ್ರಗಳು





ಓತಿ ಕೊಳ್ಳೆ ಹಿಡಿಯುವುದನ್ನು ನೋಡಿರುವಿರಲ್ಲವೇ? ನಾಲಗೆ ಉಪಯೋಗಿಸಿ ಓತಿ ಕೊಳ್ಳೆ ಹಿಡಿಯುತ್ತದೆ. ಜೇಡ ಬಲೆ ಹೆಣೆದು ಕೊಳ್ಳೆಹಿಡಿದು ತಿನ್ನುತ್ತದೆ. ಹೀಗೆ ಪ್ರತಿಯೊಂದು ಜೀವಿಯೂ ಬೇರೆ ಬೇರೆ ರೀತಿಯಲ್ಲಿ ಕೊಳ್ಳೆ ಹಿಡಿಯುತ್ತದೆ.

### ಮರಕುಟಿಗ




ನಾನು ನನ್ನ ಬಲಿಷ್ಠವಾದ ಕೊಕ್ಕಿನಿಂದ ಮರದಲ್ಲಿ ತೂತು ಕೊರೆಯುತ್ತೇನೆ. ಮರದ ಒಣಗಿದ ತೊಗಟೆಯನ್ನು ಕುಕ್ಕಿ ತೆಗೆದು ಅದರ ಒಳಗಿರುವ ಜೀವಿಗಳನ್ನು ಆಹಾರವಾಗಿ ಉಪಯೋಗಿಸುತ್ತೇನೆ. ಮರದಲ್ಲಿ ಹಿಡಿದು ನಿಲ್ಲಲು ಸಾಧ್ಯವಾಗುವ ರೀತಿಯ ಬೆರಳುಗಳು ನನಗಿವೆ.

### ಬಾತುಕೋಳಿ



ಅಗಲವಾದ ತುಟಿಗಳು ನನಗಿವೆ. ಅದನ್ನು ಉಪಯೋಗಿಸಿ ನೀರಿನಿಂದಲೂ ಕೆಸರಿನಿಂದಲೂ ಆಹಾರವನ್ನು ಹುಡುಕಿ ಹಿಡಿಯಲು ನನಗೆ ಸಾಧ್ಯವಾಗುತ್ತದೆ. ನೀರಿನಲ್ಲಿ ಈಜಲೂ ಕೆಸರಿನಲ್ಲಿ ಹೂತು ಹೋಗದಿರಲೂ ನನ್ನ ಕಾಲುಗಳು ಸಹಾಯ ಮಾಡುತ್ತವೆ.

### ಹೊನ್ನಂತಗುಬ್ಬಿ




ಹೊನ್ನಂತಗುಬ್ಬಿ ಕೊಳ್ಳೆ ಹಿಡಿಯುವುದನ್ನು ನೋಡಿರುವಿರಾ? ಸೂರ್ಯಪ್ರಕಾಶ ಮತ್ತು ಮಳೆ ಬೀಳದ ಸ್ಥಳಗಳಲ್ಲಿರುವ ಒಣಗಿದ ಹುಡಿಮಣ್ಣಿನಲ್ಲಿ ಇದು ಚಿಕ್ಕ ಹೊಂಡ ಮಾಡುತ್ತದೆ. ಇಂತಹ ಹೊಂಡಗಳನ್ನು ಮನೆಯ ಸುತ್ತಮುತ್ತ ನೀವು ಕಂಡಿರಬಹುದು. ಈ ಜಾಣರು ಕೊಂಬುಗಳನ್ನು ಮಾತ್ರ ಹೊರಹಾಕಿ ಹೊಂಡದ ಒಳಗೆ ಮಣ್ಣಿನಲ್ಲಿ ಅಡಗಿರುತ್ತವೆ. ಈ ಹೊಂಡದಲ್ಲಿ ಬೀಳುವ ಚಿಕ್ಕ ಜೀವಿಗಳಿಗೆ ಹೊರಬರಲು ಸಾಧ್ಯವಿಲ್ಲ. ಹೊಂಡದ ವೈಶಿಷ್ಟವೇ ಇದಕ್ಕೆ ಕಾರಣ.



ಕೋಳಿಗಳು  ಆಹಾರ ಹುಡುಕುವುದನ್ನು ನೀವು ಕಂಡಿರುವಿರಾ? ಕಾಲುಗಳಿಂದ ಕೆದರಿ, ಕೊಕ್ಕಿನಿಂದ ಕುಕ್ಕಿ ತಿನ್ನುವುದನ್ನು ನೀವು ನೋಡಿರುವಿರಲ್ಲವೇ? ನಿಮ್ಮ ಸುತ್ತಮುತ್ತಲಿರುವ ಹಕ್ಕಿಗಳು ಆಹಾರ ಹುಡುಕುವ ರೀತಿಯನ್ನು ನಿರೀಕ್ಷಿಸಿರಿ. ಕೊಕ್ಕುಗಳೂ ಕಾಲುಗಳೂ ಆಹಾರ ಹಿಡಿಯಲು ಅವುಗಳಿಗೆ ಹೇಗೆ ಸಹಕಾರಿಯಾಗಿವೆಯೆಂದು ಕಂಡುಹಿಡಿದು ಪರಿಸರ ಪುಸ್ತಕದಲ್ಲಿ ಬರೆಯಿರಿ.

ನನಗೆ ಚೂಪಾದ ಉಗುರುಗಳೂ ಹಲ್ಲುಗಳೂ ಇವೆ. ಕೊಳ್ಳೆಯನ್ನು ಹಿಡಿಯಲೂ ಸಿಗಿದು ತಿನ್ನಲೂ ಅವುಗಳು ನನಗೆ ಸಹಾಯ ಮಾಡುತ್ತವೆ.





ನನ್ನ ಚೂಪಾದ ಹಲ್ಲುಗಳನ್ನು ನೀವು ನೋಡಿರುವಿರಲ್ಲವೇ? ನಾನು ಇಲಿಯನ್ನು ಹಿಡಿದು ತಿನ್ನುವುದು ಈ ಹಲ್ಲುಗಳ ಸಹಾಯದಿಂದ.

ನಮ್ಮ ಮನೆಗಳಲ್ಲಿ ಕಾಣುವ ಹಲ್ಲಿ ಕೊಳ್ಳೆಹಿಡಿಯುವುದು ಹೇಗೆಂದು ನಿರೀಕ್ಷಿಸಿ ಪರಿಸರ ಪುಸ್ತಕದಲ್ಲಿ ಬರೆದಿಡಿರಿ.

## ರಕ್ಷಣೆ ಪಡೆಯುವ

**“ನರಿಗೆ ಆಮೆ ಸಿಕ್ಕಿದ ಹಾಗೆ”**

ಎಂಬ ಗಾದೆ ಮಾತನ್ನು ನೀವು ಕೇಳಿರುವಿರಲ್ಲವೇ?

ನರಿಯನ್ನು ಕಂಡಕೂಡಲೇ ಆಮೆಯಣ್ಣ ತಲೆ ಮತ್ತು ಕಾಲುಗಳನ್ನು ತನ್ನ ಗಟ್ಟಿಯಾದ ಚಿಪ್ಪಿನೊಳಗೆ ಎಳೆದುಕೊಂಡು ಕುಳಿತಿತು. ಆಮೆಯಣ್ಣನ ತಲೆ ಹೊರಬರುವುದನ್ನೇ ಕಾದು ಕುಳಿತ ನರಿ.... ಸೋಜಿಗವೇ ಸರಿ... ಶತ್ರುಗಳಿಂದ ರಕ್ಷಣೆ ಪಡೆಯಲು ಆಮೆ ಉಪಯೋಗಿಸಿದ ತಂತ್ರ ಹೇಗಿತ್ತು ಗೆಳೆಯರೇ?



ಬೇರೆ ಯಾವುದಾದರೂ ಜೀವಿಗಳು ಈ ರೀತಿಯ ಉಪಾಯಗಳನ್ನು ಬಳಸಿ ಪಾರಾಗುವುದನ್ನು ನೀವು ಕಂಡಿರುವಿರಾ?

ಕೆಳಗೆ ಕೊಟ್ಟಿರುವ ಜೀವಿಗಳು ಯಾವುವು? ಅವುಗಳು ಹೇಗೆ ಪಾರಾಗುತ್ತವೆ?

## ಪಾರಾಗುವ ಉಪಾಯಗಳು ಹಲವು

ನಾವು ಪಾರಾಗುವುದು ಹೇಗೆಂದು ಬರೆಯುವಿರಾ?



**ಓತಿ :**



**ಮುಳ್ಳುಹಂದಿ :** ಶರೀರದ ಹಿಂಭಾಗದಲ್ಲಿರುವ ಮುಳ್ಳುಗಳನ್ನು ಶತ್ರುವಿಗೆದುರಾಗಿ ಕೊಡಹುತ್ತದೆ.



**ಪ್ಯೃದ್ವಂಗಿ :** ನೀರಿನಲ್ಲಿ ಶಾಯಿ ಹರಡಿ ಪಾರಾಗುತ್ತದೆ.



**ಚೇರಟೆ :**



**ಬಸವನ ಹುಳ :**



**ಹಲ್ಲಿ :**

ಶತ್ರುಗಳಿಂದ ಪಾರಾಗಲು ಜೀವಿಗಳು ಹಲವು ಉಪಾಯಗಳನ್ನು ಬಳಸುತ್ತಿವೆಯಲ್ಲವೇ?

ಜೀವಿಗಳು ಶರೀರದ ಬಣ್ಣ ಬದಲಾಯಿಸಿಯೂ ಆಕಾರ ಬದಲಾಯಿಸಿಯೂ ಬಾಲ ತುಂಡರಿಸಿಯೂ ಶತ್ರುಗಳಿಂದ ಪಾರಾಗುತ್ತವೆ. ಜೀವಿಗಳಿಗೆ ಪ್ರಕೃತಿ ನೀಡಿದ ಕೆಲವು ಸಾಮರ್ಥ್ಯಗಳು ಇದಕ್ಕೆ ಸಹಕಾರಿಯಾಗಿದೆ. ಪ್ರಾಣಿಗಳಿಗೆ ಮಾತ್ರವಲ್ಲ, ಸಸ್ಯಗಳಿಗೂ ಈ ರೀತಿಯ ಸಾಮರ್ಥ್ಯಗಳಿವೆ.

## ತೆವಳಿಯೂ... ನಡೆದೂ...

## ಹಾರಿಯೂ...

ಜೀವಿಗಳು ನಡೆಸಿದ ಸಮ್ಮೇಳನ ನೆನಪಿದೆಯಲ್ಲವೇ?


ಎಲ್ಲಾ ಜೀವಿಗಳು ಭಾಗವಹಿಸಿದ ಸಮ್ಮೇಳನವು ಬಹಳ ಯಶಸ್ವಿಯಾಗಿತ್ತು ಎಂದು ಸಿಂಹರಾಜ ಅಭಿಪ್ರಾಯಪಟ್ಟಿತು. ಸಮ್ಮೇಳನ ನಗರಕ್ಕೆ ತಲುಪಲು ಕೆಲವು ಜೀವಿಗಳಿಗೆ ದಿನಗಟ್ಟಲೆ ಪ್ರಯಾಣ ಮಾಡಬೇಕಾಗಿ ಬಂತು.

ಅತಿ ವೇಗದ ಓಟಗಾರನಾದ ಚಿರತೆ ಮೊದಲು ತಲುಪಿತು.

ಹಾರಿ ಬಂದ ಗಿಡುಗನ ಬೆನ್ನ ಮೇಲೆ ಕುಳಿತು ಬಸವನಹುಳ ತಲುಪಿತು. ಬೇಗನೆ ತಲುಪಿದ ಬಸವನಹುಳ ಜಂಭದಿಂದಿತ್ತು.




### ನೆರಳು ಚಿತ್ರಗಳು



ಚಿತ್ರದಲ್ಲಿ ತೋರಿಸಿದಂತೆ ಬೆರಳುಗಳನ್ನು ಹಿಡಿದು ನೆರಳನ್ನು ಉಂಟುಮಾಡಿ ನೋಡಿರಿ.

ನೆರಳು ಚಿತ್ರದ ಬಾಯಿಯ ಭಾಗದಲ್ಲಿ ಬರುವ ನಿಮ್ಮ ಬೆರಳುಗಳನ್ನು ಚಲಿಸಿ ಜೀವಿಗಳ ಶಬ್ದವನ್ನು ಅನುಕರಿಸಿರಿ. ಇತರ ಜೀವಿಗಳ ನೆರಳು ಚಿತ್ರಗಳನ್ನು ರಚಿಸಲು ಪ್ರಯತ್ನಿಸಿರಿ.

ಸಮ್ಮೇಳನಕ್ಕೆ ಇತರರು ತಲುಪಿದ್ದು ಹೇಗಾಗಿರಬಹುದು?

ಜೀವಿಗಳನ್ನು ಅವುಗಳ ಸಂಚಾರ ರೀತಿಗೆ ಅನುಗುಣವಾಗಿ ಪಟ್ಟಿ ಮಾಡಿರಿ.

| ತೆವಳಿ ಬಂದವರು | ನಡೆದು ಬಂದವರು | ಹಾರಿ ಬಂದವರು |
|---|---|---|
| ಬಸವನಹುಳ | ನರಿ | ದುಂಬಿ |
| | | |
| | | |
| | | |

ಪ್ರಾಣಿ ಜಗತ್ತಿನ ಗೆಳೆಯರ ಸಂಚಾರ ರೀತಿ ವಿಭಿನ್ನವಾಗಿದೆ. ಕೆಲವರಿಗೆ ತೆವಳಲು ಮಾತ್ರ ಸಾಧ್ಯ. ಇನ್ನು ಕೆಲವರಿಗೆ ಹಾರಲೂ ನಡೆಯಲೂ ಓಡಲೂ ಸಾಧ್ಯವಿದೆ. ಹಾಗೆ ನಡೆಯಲೂ ಓಡಲೂ ಮಾತ್ರ ಸಾಧ್ಯವಿರುವವುಗಳೂ ಇವೆ.

ಜೀವಿಗಳ ಸಮ್ಮೇಳನದಲ್ಲಿ ಕಪ್ಪೆಯ ಭಾಷಣವನ್ನು ಗಮನಿಸಿರಿ.

*ಸ್ನೇಹಿತರೇ,*

*ಕ್ರೋಂ... ಕ್ರೋಂ... ಎನ್ನುವ ನಮ್ಮ ಧ್ವನಿ ನಿಮಗೆ ಪರಿಚಿತವಲ್ಲವೇ? ಹಿತ್ತಿಲು ಮತ್ತು ಗದ್ದೆಗಳಲ್ಲಿ ನಾವು ಸುಖವಾಗಿ ಕಳೆದ ಕಾಲವೊಂದಿತ್ತು. ಭತ್ತ ಮತ್ತು ಇತರ ಬೆಳೆಗಳನ್ನು ತಿಂದು ಹಾಳು ಮಾಡುವ ಕೀಟಗಳು ನಮ್ಮ ಆಹಾರವಾಗಿತ್ತು. ಹೀಗೆ ಕೃಷಿಕರಿಗೆ ನಾವು ತುಂಬಾ ಉಪಕಾರಿಗಳಾಗಿದ್ದೆವು.*



*ಹೀಗಿದ್ದರೂ ಮನುಷ್ಯರು ನಮ್ಮನ್ನು ಕೊಂದು ತಿಂದರು. ನಮ್ಮ ವಾಸಸ್ಥಳಗಳಾದ ಗದ್ದೆ ಮತ್ತು ಜೌಗು ಪ್ರದೇಶಗಳಿಗೆ ಮಣ್ಣು ತುಂಬಿಸಿದರು. ಕೃಷಿ ಸ್ಥಳಗಳಲ್ಲಿ ಕೀಟನಾಶಕಗಳನ್ನು ಸಿಂಪಡಿಸಿದರು. ಇದಕ್ಕೆದುರಾಗಿ ನಾವು ಒಟ್ಟಾಗಿ ಪ್ರತಿಭಟಿಸಬೇಡವೇ? ಇಂದು ನಮಗೆ ಈ ಸ್ಥಿತಿಯಾದರೆ ನಾಳೆ ನಿಮ್ಮಲ್ಲಿ ಕೆಲವರಿಗೆ ಆಗಬಹುದು. ತಕ್ಷಣ ಏನಾದರೂ ಮಾಡಲೇಬೇಕು.*

ಕಪ್ಪೆಯ ಭಾಷಣ ಕೇಳಿದಿರಲ್ಲವೇ? ಕಪ್ಪೆ ಮಾತ್ರವಲ್ಲ, ಮತ್ತೆ ಕೆಲವು ಜೀವಿಗಳು ಮನುಷ್ಯನ ಹಸ್ತಕ್ಷೇಪದಿಂದಾಗಿ ಭೂಮಿಯಿಂದ ಕಣ್ಮರೆಯಾಗುತ್ತಿವೆ. ಅವುಗಳನ್ನು ಸಂರಕ್ಷಿಸಬೇಡವೇ? ಅವರೂ ಭೂಮಿಯ ಹಕ್ಕುದಾರರಲ್ಲವೇ?

ಈ ಸಂದೇಶವನ್ನು ಎಲ್ಲರಿಗೂ ತಲುಪಿಸಲು ನಿಮಗೇನು ಮಾಡಲು ಸಾಧ್ಯವಿದೆ? ಪೋಸ್ಟರ್, ಘೋಷಣಾ ಫಲಕ ಎಂಬಿವುಗಳನ್ನು ಉಪಯೋಗಿಸಬಹುದಲ್ಲವೇ?




## ಸಮುದ್ರದಲ್ಲೊಂದು ಹೂದೋಟ

ಹವಳದ ದಿಬ್ಬಗಳನ್ನು ನೋಡಲು ಎಷ್ಟೊಂದು ಸುಂದರ! ಇದು ಸಮುದ್ರದ ದೊಡ್ಡದೊಂದು ಜೀವಜಾಲವಾಗಿದೆ. ಕಾಡಿನಂತೆ ಕಾಣುವ ಹವಳದ ದಿಬ್ಬಗಳು ಸಮುದ್ರದ ಮಳೆಕಾಡುಗಳಾಗಿವೆ. ಒಂದಕ್ಕೊಂದು ಸೇರಿಕೊಂಡು ಅವುಗಳು ಬೆಳೆಯುತ್ತವೆ.



ಇವುಗಳು ಬಹಳ ಗಟ್ಟಿಯಾಗಿವೆ. ಇವುಗಳು ಹಲವು ರೀತಿಯಲ್ಲಿ ನಮಗೆ ಪ್ರಯೋಜನಕಾರಿಯಾಗಿವೆ ಆದರೆ ಈ ಹೂದೋಟ ಮನುಷ್ಯನ ಹಸ್ತಕ್ಷೇಪದಿಂದ ನಾಶವಾಗ ತೊಡಗಿದೆ. ಈ ಹೂದೋಟದ ನಾಶವನ್ನು ತಡೆಯಬೇಕು.

ಹೆಬ್ಬೆಟ್ಟಿನಿಂದ ಮಾಡಿದ ಚಿತ್ರಗಳನ್ನು ನೋಡಿದಿರಲ್ಲವೇ? ನೀವೂ ಈ ರೀತಿ ಮಾಡಿ ನೋಡಿರಿ.





## ಕಲಿಕೆಯ ಪ್ರಧಾನ ಸಾಧನೆಗಳು

- ನಮ್ಮ ಸುತ್ತಮುತ್ತಲೂ ವಿವಿಧ ರೀತಿಯ ಅನೇಕ ಜೀವಿಗಳಿವೆಯೆಂದೂ ಅವುಗಳು ಯಾವುವೆಂದೂ ಹೇಳಲು ಸಾಧ್ಯವಾಗುವುದು.
- ವಿಶೇಷತೆಗಳನ್ನು ಗಮನಿಸಿ ಸಾಕುಪ್ರಾಣಿಗಳನ್ನು ಮತ್ತು ಅವುಗಳಿಂದ ನಮಗಿರುವ ಪ್ರಯೋಜನಗಳನ್ನು ಪಟ್ಟಿಮಾಡಲು ಸಾಧ್ಯವಾಗುವುದು.
- ಆಹಾರ ರೀತಿಗನುಸಾರವಾಗಿ ಶಾರೀರಿಕ ವ್ಯತ್ಯಾಸಗಳು ಪ್ರತಿಯೊಂದು ಜೀವಿಗೂ ಇದೆ ಎಂದು ತಿಳಿಯಲು ಸಾಧ್ಯವಾಗುವುದು.
- ಶತ್ರುಗಳಿಂದ ರಕ್ಷಣೆ ಪಡೆಯಲು ಕೆಲವು ಜೀವಿಗಳಿಗಿರುವ ಹೊಂದಾಣಿಕೆಗಳ ಕುರಿತು ಹೇಳಲು ಸಾಧ್ಯವಾಗುವುದು.
- ಜೀವಿಗಳ ಸಂಚಾರ ವಿಧಾನಗಳ ವಿಶೇಷತೆಗಳಿಗೆ ಅನುಸಾರವಾಗಿ ಪಟ್ಟಿ ಮಾಡಲು ಸಾಧ್ಯವಾಗುವುದು.
- ಮನುಷ್ಯನ ಕೆಲವು ಹಸ್ತಕ್ಷೇಪಗಳು ಜೀವಿಗಳ ಉಳಿಯುವಿಕೆಗೆ ಹೇಗೆ ದೋಷಕರವಾಗಿದೆ ಎಂದು ತಿಳಿಯಲು ಸಾಧ್ಯವಾಗುವುದು.
- ಜೀವಿಗಳನ್ನು ನಾವು ಸಂರಕ್ಷಿಸಬೇಕು ಎಂಬ ಸಂದೇಶವನ್ನು ಜನರಿಗೆ ತಲುಪಿಸಲು ಅಗತ್ಯವಾದ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು.

## ಮೌಲ್ಯಮಾಪನ ಮಾಡೋಣ

1. ಚಿತ್ರದಲ್ಲಿ ಕಾಣುವ ಜೀವಿಗಳನ್ನು ಆಹಾರ ರೀತಿಗನುಸಾರವಾಗಿ ವರ್ಗೀಕರಿಸಿ ಹೆಸರಿಸಿರಿ.




2. ಶತ್ರುಗಳಿಂದ ಪಾರಾಗಲು ಶರೀರದ ಒಂದು ಭಾಗವನ್ನು ತುಂಡರಿಸುವ ಜೀವಿ ಯಾವುದು?

ಎ) ಹಾವು ಬಿ) ಹಲ್ಲಿ ಸಿ) ಓತಿ ಡಿ) ಇಲಿ

3. ಕೆಳಗೆ ಕೊಟ್ಟಿರುವ ಜೀವಿಗಳಲ್ಲಿ ಈಜಲು ಮತ್ತು ನಡೆಯಲು ಸಾಧ್ಯವಿರುವುದು ಯಾರಿಗೆ?

ಎ) ಮೀನು ಬಿ) ಹಾವು ಸಿ) ಕಪ್ಪೆ ಡಿ) ಬಾತುಕೋಳಿ

4. ಚಿತ್ರಗಳನ್ನು ಪರಸ್ಪರ ಹೊಂದಿಸಿ ಜೀವಿಗಳನ್ನು ಹೆಸರಿಸಿರಿ.




## ಮುಂದುವರಿದ ಚಟುವಟಿಕೆಗಳು

1. ಜಿಗ್‌ಸೋ ಪಝಲ್ ತಯಾರಿಸುವ :

   ಇಷ್ಟವಿರುವ ಒಂದು ಜೀವಿಯನ್ನು ಚಿತ್ರಿಸಿ ಬಣ್ಣ ಕೊಟ್ಟು ಕಾರ್ಡ್‌ಬೋರ್ಡ್‌ನಲ್ಲಿ ಅಂಟಿಸಿರಿ. ಅದನ್ನು ಹಲವು ತುಂಡುಗಳಾಗಿ ಕತ್ತರಿಸಿ ಗೆಳೆಯನಿಗೆ ನೀಡಿರಿ. ತುಂಡುಗಳನ್ನು ಜೋಡಿಸಿ ಜೀವಿ ಯಾವುದೆಂದು ಅವನು ಕಂಡುಹಿಡಿಯಲಿ.

2. ಎಲೆಗಳಿಂದ ಕೆಲವು ಜೀವಿಗಳ ಚಿತ್ರ ತಯಾರಿಸಿರುವುದನ್ನು ನೋಡಿರಿ. ಇನ್ನೂ ಹೆಚ್ಚಿನ ಚಿತ್ರಗಳನ್ನು ತಯಾರಿಸಿರಿ.



3. ಜೀವಿಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

# 3 ನೀರು ಜೀವಾಮೃತ




ಬಯಲಿನ ಬದಿಯಲಿ ನಡೆಯುತ ನಾನು
ಬಾಡಿದ ಗಿಡಗಳ ನೋಡಿದೆನು
ಮೋಡವು ಕವಿದಿಹ ಬಾನನು ನೋಡಿ
ಕರೆದೆನು ಮಳೆಯನು ಕೈಬೀಸಿ
ಧೂಳನು ಎಬ್ಬಿಸಿ ಬಲುವೇಗದಲಿ
ಬೀಸುತಿಹುದು ತಂಗಾಳಿ
ಗುಡುಗಿನ ಸದ್ದನು ಕೇಳುತಲಿ
ಮನೆಯೊಳಗವಿತೆನು ನಿಮಿಷದಲಿ
ಪಟ ಪಟ ಮಳೆಯದು ಸುರಿಯುವ ಸಮಯದಿ
ನಲಿದುವು ಗಿಡಗಳು ಮೋದದಲಿ

ಹಾಯ್ ಮಳೆ!

ಬಾನಿನಿಂದ ನೆಲಕ್ಕೆ ಓಡಿ ಬಂದ ಚಿಕ್ಕ ನೀರಹನಿಗಳು, ಜೊತೆಗೆ ತಂಗಾಳಿಯೂ ಇದೆ. ಸ್ವಲ್ಪ ಕಳೆದಾಗ ಹನಿಮಳೆಯ ರೂಪ ಬದಲಾಯಿತು. ಭಾರೀ ಮಳೆಯಾಯಿತು. ಅಂಗಳ ತುಂಬಾ ಮಳೆನೀರು ತುಂಬಿತು. ರಾಹುಲ್‌ನ ಸಂತೋಷಕ್ಕೆ ಪಾರವೇ ಇಲ್ಲ. ಅವನು ಕಾಗದದ ದೋಣಿ ಮಾಡಿ ನೀರಿನಲ್ಲಿ ತೇಲಿಬಿಟ್ಟನು.

ರಾಹುಲ್‌ಗೆ ಮಾತ್ರವಲ್ಲ ಸಂತೋಷವಾದದ್ದು.
ನೀರಿಗಾಗಿ ಹಾತೊರೆಯುತ್ತಿರುವ ಮಣ್ಣಿಗೆ....
ಬಾಡಿ ಬಸವಳಿದ ಗಿಡಮರಗಳಿಗೆ
ಕ್ರೋಂ... ವಟಗಟ್ಟುವ ಕಪ್ಪೆಗಳಿಗೆ ...
ಕಟ್ಟಿರುವೆಗಳಿಗೆ... ಮರಿಗಿಣಿಗೆ...

ಹೋ ... ಎಂಥಾ ಬೇಸಿಗೆಯಾಗಿತ್ತು.
ಮಳೆಗಾಗಿ ಎಲ್ಲರೂ ಕಾದಿದ್ದರು.
ಎಲ್ಲರಿಗೂ ಮುದ ನೀಡುತ್ತಾ ಇದೋ ಬಂತು
ತಂಪಾದ ಮಳೆ.



## ಮಳೆ ಬಂದಾಗ

ಮಳೆ ಸುರಿದ ಬಳಿಕ ನಮ್ಮ ಸುತ್ತಮುತ್ತ ಏನೆಲ್ಲ ಬದಲಾವಣೆಗಳು ಉಂಟಾಗುತ್ತವೆ ಎಂಬುದನ್ನು ಗಮನಿಸಿರುವಿರಾ?

- ತಂಪಾಗುತ್ತದೆ
- ಬಾವಿ, ತೋಡು, ಕೆರೆ, ನದಿ ಮೊದಲಾದ ನೀರಿನ ಮೂಲಗಳು ತುಂಬುತ್ತವೆ.
- ಬಯಲುಗಳಲ್ಲಿ ಹುಲ್ಲು ಹುಟ್ಟುತ್ತದೆ.
- ಗಿಡಮರಗಳು ಚಿಗುರುತ್ತವೆ.
- ಕೃಷಿ ಮಾಡಲು ತೊಡಗುತ್ತಾರೆ.
- ಗುಂಡಿಗಳಲ್ಲಿ ಹಾಗೂ ತಗ್ಗು ಪ್ರದೇಶಗಳಲ್ಲಿ ನೀರು ತುಂಬುತ್ತದೆ.
- ಮಣ್ಣು ಕೊಚ್ಚಿ ಹೋಗುತ್ತದೆ.
- ಮಳೆಹಾತೆಗಳು ಮಣ್ಣಿನಿಂದ ಮೇಲೆದ್ದು ಹಾರಲು ತೊಡಗುತ್ತವೆ.

ಬಾನಿನಿಂದ ಭುವಿಗೆ ಸುರಿಯುವ ಮಳೆಯನ್ನು ಆಶ್ರಯಿಸಿ ಸಸ್ಯಗಳು, ಪ್ರಾಣಿಗಳು, ಮನುಷ್ಯರೇ ಮೊದಲಾದ ಪ್ರಕೃತಿಯ ಎಲ್ಲಾ ಜೀವಜಾಲಗಳು ಬದುಕುವುವು.

ನೀರಿಲ್ಲದೆ ನಮಗೆ ಬದುಕಲು ಸಾಧ್ಯವೇ?

## ನೀರಿನ ಮೂಲಗಳು

ಕುಡಿಯಲು, ಕೃಷಿಗೆ ಮತ್ತು ಇತರ ಅಗತ್ಯಗಳಿಗಾಗಿ ನಾವು ಉಪಯೋಗಿಸುವ ನೀರು ಎಲ್ಲಿಂದೆಲ್ಲಾ ಲಭಿಸುತ್ತದೆ?

ನಮ್ಮ ಸುತ್ತಮುತ್ತಲಿರುವ ನೀರಿನ ಮೂಲಗಳನ್ನು ನಾವು ಇದಕ್ಕಾಗಿ ಆಶ್ರಯಿಸುತ್ತೇವೆ. ನೀರಿನ ಮೂಲಗಳನ್ನು ತಲುಪುವ ಮಳೆನೀರನ್ನು ನಾವು ವಿವಿಧ ಅಗತ್ಯಗಳಿಗಾಗಿ ಬಳಸುತ್ತೇವೆ.

ಆ ನೀರಿನ ಮೂಲಗಳು ಯಾವುವು?

ಬಾವಿ, ಕೆರೆ, ತೋಡು, ನದಿ, ಹಿನ್ನೀರು, ಸರೋವರ .....

ನಿಮ್ಮ ಊರಿನಲ್ಲಿ ನೀರಿನ ಯಾವೆಲ್ಲ ಮೂಲಗಳಿವೆ?

-
-

ಹಳ್ಳಿಯಲ್ಲಿ ಹೆಚ್ಚಿನವರೂ ಕುಡಿಯಲು ಬಾವಿಯ ನೀರನ್ನು ಉಪಯೋಗಿಸುತ್ತಾರೆ. ಆದರೆ ಪಟ್ಟಣದಲ್ಲಿ ಪೈಪು ನೀರನ್ನು ಆಶ್ರಯಿಸುತ್ತಾರೆ. ನೀರಿನ ಮೂಲಗಳಿಂದ ನೀರನ್ನು ಶುದ್ಧೀಕರಿಸಿ ಪೈಪಿನ ಮೂಲಕ ಅವರಿಗೆ ತಲುಪಿಸಲಾಗುತ್ತದೆ.

## ನನಗೂ ಬೇಕು ನೀರು


ಅತಿಯಾಗಿ ಬಾಯಾರಿಕೆ ಆದ ಕ್ಷಣವನ್ನೊಮ್ಮೆ ಯೋಚಿಸಿರಿ. ಬಾಯಾರಿಕೆ ಆದಾಗ ಸ್ವಲ್ಪ ನೀರು ಸಿಕ್ಕಿದರೆ ಎಷ್ಟು ಸಮಾಧಾನವಾದೀತು. ಅಲ್ಲವೇ? ನಮಗೆ ಮಾತ್ರವಲ್ಲ, ಪ್ರಾಣಿ ಪಕ್ಷಿಗಳೇ ಮೊದಲಾದ ಪ್ರಕೃತಿಯ ಎಲ್ಲಾ ಜೀವಜಾಲಗಳ ಉಳಿವಿಗೆ ನೀರು ಅನಿವಾರ್ಯ.







ನಮಗೆ ಕುಡಿಯಲು, ಸ್ನಾನ ಮಾಡಲು, ಕೃಷಿಗೆ ನೀರು ಅತಿ ಅಗತ್ಯವಾಗಿದೆ. ಬೇರೆ ಯಾವೆಲ್ಲಾ ಅಗತ್ಯಗಳಿಗೆ ನೀರನ್ನು ಬಳಸುತ್ತಾರೆ?



- ಅಡುಗೆಗೆ
- ಪಾತ್ರೆ ತೊಳೆಯಲು
- ಬಟ್ಟೆ ಒಗೆಯಲು
- ವಾಹನಗಳನ್ನು ತೊಳೆಯಲು
- ಗಿಡಗಳಿಗೆ ನೀರುಣಿಸಲು
- 
- 
- 


ಹೀಗೆ ನೀರಿನ ಅದೆಷ್ಟು ಅಗತ್ಯಗಳು!

ಮನೆ ಬಳಕೆ, ಕೃಷಿ, ಕೈಗಾರಿಕೆ, ಕಟ್ಟಡ ನಿರ್ಮಾಣ ಮೊದಲಾದ ಹಲವು ಅಗತ್ಯಗಳಿಗೆ ನಾವು ನೀರನ್ನು ಉಪಯೋಗಿಸುತ್ತೇವೆ.

## ನೀರಿಲ್ಲದಿದ್ದರೆ








ಹಾ... ನೀರಿಲ್ಲದ ಸ್ಥಿತಿಯನ್ನೊಮ್ಮೆ ಯೋಚಿಸಿರಿ. ಬರಡಾದ ಕೃಷಿ ಭೂಮಿಗಳು, ಬಾವಿಗಳು, ಹೊಳೆಗಳು, ಕೆರೆಗಳು... ಕಡು ಬೇಸಿಗೆಯಲ್ಲಿ ಕೆಲವು ಸ್ಥಳಗಳಲ್ಲಿ ಅತಿಯಾದ ನೀರಿನ ಕ್ಷಾಮ ತಲೆದೋರುವುದುಂಟು. ಕುಡಿಯುವ ನೀರಿಗೂ ಕಷ್ಟಪಡುವ ಜನರ ಕುರಿತಾದ ವಾರ್ತೆಗಳನ್ನು, ಚಿತ್ರಗಳನ್ನು ದಿನಪತ್ರಿಕೆಗಳಲ್ಲಿ ನೋಡಿಲ್ಲವೇ? ನಿಮ್ಮ ಊರಿನಲ್ಲಿ ಎಂದಾದರೂ ನೀರಿನ ಕೊರತೆಯನ್ನು ಅನುಭವಿಸಿರುವಿರಾ?

## ನೀರು ಅಮೂಲ್ಯ




ಅಮೂಲ್ಯವಾದ ನೀರು ಪೋಲಾಗುವ ಇಂತಹ ಸಂದರ್ಭಗಳನ್ನು ನೀವು ನೋಡಿರಬಹುದು.

ನೀರು ಪೋಲಾಗುವ ಇತರ ಸಂದರ್ಭಗಳು ಯಾವುವು?

- ಟ್ಯಾಂಕ್ ತುಂಬಿ ಹರಿಯುವುದು.
- ಪೈಪ್ ಒಡೆದು ನೀರು ಪೋಲಾಗುವುದು.
- ಸ್ನಾನದ ಕೋಣೆಯಲ್ಲಿ ಶವರ್ ಅನಗತ್ಯವಾಗಿ ತೆರೆದಿಡುವುದು.
-







### ಕುಡಿಯುವ ನೀರೂ ಮಾರಾಟಕ್ಕೆ

ಕುಡಿಯಲು ಅಗತ್ಯವಾದ ಶುದ್ಧ ನೀರನ್ನು ಹಣಕೊಟ್ಟು ಖರೀದಿಸಬೇಕಾದ ಸ್ಥಿತಿ ನಮಗೆ ಬಂದೊದಗಿದೆ. ಪಟ್ಟಣಗಳಲ್ಲಿ ಪೈಪಿನ ಮೂಲಕ ಶುದ್ಧ ನೀರನ್ನು ತಲುಪಿಸುವರು. ಅದಕ್ಕೂ ನೀರಿನ ಉಪಯೋಗಕ್ಕನುಸಾರವಾಗಿ ಹಣ ನೀಡಬೇಕು. ನೀರಿನ ಉಪಯೋಗವನ್ನು ನಿಯಂತ್ರಿಸಿಯೂ ನೀರು ಮಲಿನವಾಗುವುದನ್ನು ತಡೆದೂ ನಾವು ನೀರಿನ ಸಂರಕ್ಷಣೆಯನ್ನು ಮಾಡಬೇಕು.



## ನನ್ನ ಸರಿ ತಪ್ಪುಗಳು

| | ✓ | ✗ |
|---|---|---|
| ನಾನು ಹಲ್ಲುಜ್ಜುವಾಗ ನಳ್ಳಿಯನ್ನು ತೆರೆದಿಡುವುದಿಲ್ಲ. | | |
| ತೆರೆದ ನಳ್ಳಿಯನ್ನು ಕಂಡಾಗ ಮುಚ್ಚುತ್ತೇನೆ. | | |
| ಪಾತ್ರೆ ತೊಳೆದ ನೀರನ್ನು ತರಕಾರಿ ತೋಟ, ಹೂದೋಟಗಳಿಗೆ ಹಾಕುತ್ತೇನೆ. | | |
| ಯಾರಾದರೂ ನೀರು ಪೋಲು ಮಾಡುವುದನ್ನು ಕಂಡಾಗ ಹಾಗೆ ಮಾಡಬಾರದೆಂದು ತಿಳಿಸುತ್ತೇನೆ. | | |
| ಸಾರ್ವಜನಿಕ ನಳ್ಳಿ ಒಡೆದು ನೀರು ಪೋಲಾಗುತ್ತಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇನೆ. | | |

ನೀರು ಅಮೂಲ್ಯವಾದುದು. ಅದು ಪ್ರಕೃತಿಯ ವರದಾನ. ನೀರನ್ನು ಪೋಲು ಮಾಡಬಾರದು. ನೀರಿನ ಬದಲು ಉಪಯೋಗಿಸಲು ಬೇರೆ ಏನೂ ಇಲ್ಲ ಎಂಬುದನ್ನು ನಾವು ಅರಿಯಬೇಕು.


'ಜಲ ಸಂರಕ್ಷಣೆ' ಎಂಬ ಆಶಯದ ಪ್ರಚಾರಕ್ಕಾಗಿ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳು ಯಾವುವು?




- ಘೋಷಣಾ ಫಲಕಗಳು
- ಭಿತ್ತಿಪತ್ರ
- ವ್ಯಂಗ್ಯಚಿತ್ರ
- ಭಿತ್ತಿಪತ್ರಿಕೆ
- ಜನಜಾಗೃತಿ ಮೆರವಣಿಗೆ
- 
- 

## ಎಷ್ಟು ಹನಿಗಳು?

ಪ್ರತಿದಿನ ನಾವು ಎಷ್ಟು ನೀರನ್ನು ಕುಡಿಯಲು, ಸ್ನಾನ ಮಾಡಲು ಹಾಗೂ ಇತರ ಅಗತ್ಯಗಳಿಗಾಗಿ ಬಳಸುತ್ತೇವೆ?



ಕೆಳಗೆ ಕೊಟ್ಟಿರುವ ಚಟುವಟಿಕೆಯನ್ನು ಮಾಡಿರಿ.

**ಅಗತ್ಯವಿರುವ ಸಾಮಗ್ರಿಗಳು** : ನೀರು, ಫಿಲ್ಲರ್, ಚಮಚ, ಗ್ಲಾಸು, ಲೋಟೆ, ಬಾಲ್ದಿ

ಚಿತ್ರದಲ್ಲಿ ಕಾಣುವಂತೆ ಫಿಲ್ಲರ್ ಉಪಯೋಗಿಸಿ ಚಮಚಕ್ಕೆ ನೀರು ತುಂಬಿಸಿರಿ. ಚಮಚ ತುಂಬಲು ಎಷ್ಟು ಬಿಂದು ನೀರು ಬೇಕು ಎಂಬುದನ್ನು ಎಣಿಸಲು ಮರೆಯದಿರಿ. ಗ್ಲಾಸು ತುಂಬಲು ಎಷ್ಟು ಚಮಚ ನೀರು ಬೇಕೆಂದು ನೋಡಿರಿ. ಲೋಟೆ ತುಂಬಲು ಎಷ್ಟು ಗ್ಲಾಸು ನೀರು ಬೇಕೆಂದು ನೋಡಿರಿ. ಬಳಿಕ ಲೋಟೆ ಉಪಯೋಗಿಸಿ ಬಾಲ್ದಿಯನ್ನು ತುಂಬಿಸಿರಿ. ಬಾಲ್ದಿ ತುಂಬಲು ಎಷ್ಟು ಲೋಟೆ ನೀರು ಬೇಕಾಯಿತು?

ಒಂದು ಬಾಲ್ದಿ ತುಂಬಲು ಎಷ್ಟು ಬಿಂದು ನೀರು ಬೇಕಾಯಿತು ಎಂಬುದನ್ನು ಒಮ್ಮೆ ಯೋಚಿಸಿ ನೋಡಿರಿ. ಈ ರೀತಿ ನಾವು ನಿತ್ಯವು ಎಷ್ಟು ಬಾಲ್ದಿ ನೀರನ್ನು ವಿವಿಧ ಅಗತ್ಯಗಳಿಗಾಗಿ ಉಪಯೋಗಿಸುತ್ತೇವೆ!




ಒಂದೊಂದು ಹನಿ ನೀರೂ ಅಮೂಲ್ಯವಾದುದು. ಒಂದು ಹನಿ ನೀರನ್ನೂ ಪೋಲುಮಾಡದಿರಿ. ಹನಿಗೂಡಿ ಹಳ್ಳ ಎಂಬ ಗಾದೆಯನ್ನು ಮರೆಯದಿರಿ.

## ರಾಧಳ ದೂರು




ರಾಧ ಮತ್ತು ರಾಜುವಿಗೆ ಎರಡು ಲೋಟ ತುಂಬ ಪಾಯಸವನ್ನು ಅಮ್ಮ ನೀಡಿದಳು. ರಾಧೆಗೆ ಪಾಯಸವನ್ನು ತನ್ನ ಗಾಜಿನ ಪಾತ್ರೆಯಲ್ಲಿ ಹಾಕಿ ಕುಡಿಯಲು ಇಷ್ಟ. ಅಮ್ಮ ಸ್ಟೀಲು ಲೋಟದಿಂದ ಪಾಯಸವನ್ನು ಗಾಜಿನ ಪಾತ್ರೆಗೆ ಎರೆದು ಕೊಟ್ಟಳು. ಆದರೂ ಅವಳಿಗೆ ಸಂತೋಷವಾಗಲಿಲ್ಲ. ಅವಳು ಅಮ್ಮನಲ್ಲಿ ದೂರು ಹೇಳಿದಳು. "ಅಮ್ಮಾ, ಅಣ್ಣನಿಗಿಂತ ಕಡಿಮೆ ಪಾಯಸವನ್ನಲ್ಲವೇ ನನಗೆ ಕೊಟ್ಟದ್ದು?"



- ನಿಮ್ಮ ಅನಿಸಿಕೆ ಏನು?
- ರಾಧಳ ಗಾಜಿನ ಪಾತ್ರೆಯಲ್ಲಿರುವ ಪಾಯಸದ ಪ್ರಮಾಣ ಕಡಿಮೆಯೇ?

## ಬಣ್ಣ ಹಚ್ಚುವ

ಕೆಳಗೆ ಕೊಟ್ಟಿರುವ ಯಾವೆಲ್ಲ ಪಾತ್ರೆಗಳನ್ನು ನೀರು ಸಂಗ್ರಹಿಸಲು ನೀವು ಉಪಯೋಗಿಸುವಿರಿ? ಅವುಗಳಿಗೆ ಬಣ್ಣ ಹಚ್ಚಿರಿ.



- ಚಿತ್ರದಲ್ಲಿರುವ ಯಾವ ಪಾತ್ರೆಯಲ್ಲಿ ಅತಿ ಹೆಚ್ಚು ನೀರು ಹಿಡಿಯಬಹುದು?
- ಅತಿ ಕಡಿಮೆ ನೀರು ಹಿಡಿಯುವ ಪಾತ್ರೆ ಯಾವುದು?

ಮನೆಯಲ್ಲಿ ನೀರು ಸಂಗ್ರಹಿಸುವ ಇತರ ಪಾತ್ರೆಗಳ ಚಿತ್ರವನ್ನು ನಿಮ್ಮ ಪರಿಸರ ಪುಸ್ತಕದಲ್ಲಿ ರಚಿಸಿ ಬಣ್ಣ ಹಚ್ಚಿರಿ.

## ಬಾವಿಯ ಸಮೀಪ

ಇವುಗಳಲ್ಲಿ ಯಾವ ಬಾವಿಯ ನೀರನ್ನು ನೀವು ಕುಡಿಯಲು ಉಪಯೋಗಿಸುವಿರಿ? ಯಾಕೆ?





ಹೆಚ್ಚಿನ ಜನರು ಕುಡಿಯುವ ನೀರಿಗಾಗಿ ಬಾವಿಯನ್ನೇ ಆಶ್ರಯಿಸುತ್ತಾರೆ. ಬಾವಿಯನ್ನು ಶುಚಿಯಾಗಿರಿಸಬೇಕು.

ಹಲವಾರು ಕಾರಣಗಳಿಂದ ಬಾವಿಯ ನೀರು ಮಲಿನವಾಗುತ್ತದೆ. ಅವುಗಳು ಯಾವುವೆಂದು ನಾವು ಕಂಡುಹಿಡಿಯೋಣ.

ಅಧ್ಯಾಪಕರೊಂದಿಗೆ ಶಾಲೆಯ ಮತ್ತು ಸುತ್ತಮುತ್ತಲ ನಾಲ್ಕೊ, ಐದೋ ಮನೆಗಳ ಬಾವಿಗಳನ್ನು ನಿರೀಕ್ಷಣೆ ಮಾಡಿ, ಮಾಹಿತಿಗಳನ್ನು ಪರಿಸರ ಪುಸ್ತಕದಲ್ಲಿ ಬರೆಯಿರಿ.

ಯಾವೆಲ್ಲ ವಿಚಾರಗಳನ್ನು ನಿರೀಕ್ಷಣೆ ಮಾಡಬೇಕು?

- ಬಾವಿಯನ್ನು ಬಲೆಯಿಂದ ಮುಚ್ಚಲಾಗಿದೆಯೇ?
- ಬಾವಿಗೆ ಕಟ್ಟೆ ಇದೆಯೇ?
- ಬಾವಿಯ ಸಮೀಪ ಮಲಿನಜಲ ಕಟ್ಟಿ ನಿಲ್ಲುತ್ತದೆಯೇ?
- ಬಾವಿಯ ಸಮೀಪ ಸ್ನಾನ ಮಾಡುತ್ತಾರೆಯೇ?
- ಬಾವಿಯ ಸಮೀಪ ಬಟ್ಟೆ ಒಗೆಯುತ್ತಾರೆಯೇ?
- ಪಾಯಿಖಾನೆ ಗುಂಡಿಯನ್ನು ಬಾವಿಯಿಂದ ನಿರ್ದಿಷ್ಟ ದೂರದಲ್ಲಿ ನಿರ್ಮಿಸಲಾಗಿದೆಯೇ?

ನೀವು ನಿರೀಕ್ಷಣೆ ಮಾಡಿದ ಬಾವಿಗಳಲ್ಲಿ ಶುಚಿಯಾಗಿರುವುದು ಯಾವುದು? ಈಗ ಹೇಳಿರಿ. ಮಲಿನಗೊಂಡ ಬಾವಿಗಳಿವೆಯೇ? ಅವುಗಳನ್ನು ಶುಚಿಗೊಳಿಸಲು ಏನು ಮಾಡಬೇಕು? ಸೂಚಿಸಿರಿ.

## ಕುಡಿಯುವ ನೀರು

ಶಾಲೆಗೆ ಹೋಗುವಾಗ ನೀವು ಒಂದು ಬಾಟಲಿ ನೀರನ್ನಾದರೂ ಕೊಂಡುಹೋಗುವುದಿಲ್ಲವೇ?

ನೀವು ತೆಗೆದುಕೊಂಡು ಹೋಗುವುದು ಕುದಿಸಿ ತಣಿಸಿದ ನೀರನ್ನಲ್ಲವೇ?

ನಮಗೆ ಲಭಿಸುವ ನೀರು ಯಾವಾಗಲೂ ಶುದ್ಧವಾಗಿರಬೇಕೆಂದಿಲ್ಲ. ಶುದ್ಧವಾದ ನೀರನ್ನು ಉಪಯೋಗಿಸದಿದ್ದರೆ ಹಲವಾರು ರೋಗಗಳು ಬರುವ ಸಾಧ್ಯತೆಯಿದೆ.


## ನೀರನ್ನು ಶುದ್ಧೀಕರಿಸುವ

ನೀರನ್ನು ಶುದ್ಧೀಕರಿಸಲು ಇಂದು ಹಲವಾರು ವಿಧಾನಗಳಿವೆ. ವಾಟರ್ ಪ್ಯೂರಿಫಯರ್ ನಂತಹ ಆಧುನಿಕ ಉಪಕರಣಗಳು ಇಂದು ಲಭ್ಯವಿದೆ. ಈ ರೀತಿಯ ಉಪಕರಣಗಳು ಮನೆಗಳಲ್ಲೂ ಶಾಲೆಗಳಲ್ಲೂ ಇತರ ಸಂಸ್ಥೆಗಳಲ್ಲೂ ಬಳಸಲ್ಪಡುತ್ತವೆ.



ನೀರನ್ನು ಶುದ್ಧೀಕರಿಸುವ ಒಂದು ಸಾಮಾನ್ಯ ವಿಧಾನವನ್ನು ತಿಳಿಯುವ.

## ಮೂರು ಚಟ್ಟಿಯ ಜರಡೆ



ಸಮಾನ ಗಾತ್ರವಿರುವ ಮೂರು ಮಣ್ಣಿನ ಪಾತ್ರೆಗಳನ್ನೋ ಗೆರಟೆಗಳನ್ನೋ ತೆಗೆದುಕೊಳ್ಳಿರಿ. ಅವುಗಳ ಅಡಿಭಾಗದ ಮಧ್ಯದಲ್ಲಿ ಚಿಕ್ಕ ರಂಧ್ರವನ್ನು ಮಾಡಿರಿ. ಚಿತ್ರದಲ್ಲಿ ತೋರಿಸಿದಂತೆ ಮೂರೂ ಪಾತ್ರೆಗಳನ್ನು ವ್ಯವಸ್ಥೆಗೊಳಿಸಿರಿ. ಮೇಲಿನ ಪಾತ್ರೆಯಲ್ಲಿ ಹರಳುಕಲ್ಲು, ಮಧ್ಯದ ಪಾತ್ರೆಯಲ್ಲಿ ಹೊಯಿಗೆ ಮತ್ತು ಕೆಳಭಾಗದಲ್ಲಿರುವ ಪಾತ್ರೆಯಲ್ಲಿ ಗೆರಟೆಯ ಮಸಿ ಇವುಗಳನ್ನು ತೊಳೆದು ಶುಚಿಗೊಳಿಸಿ ಹಾಕಿರಿ. ಮೂರು ಚಟ್ಟಿಯ ಜರಡೆಯ ಕೆಳಗೆ ಶುದ್ಧ ನೀರು ಸಂಗ್ರಹಿಸಲು ಶುಚಿಯಾದ ಪಾತ್ರೆಯನ್ನು ಇರಿಸಿರಿ. ಬಳಿಕ ಮೇಲಿನ ಪಾತ್ರೆಗೆ ಕೆಸರುನೀರು ಎರೆಯಿರಿ. ಕೆಸರುನೀರಿಗೆ ಯಾವ ಬದಲಾವಣೆ ಉಂಟಾಯಿತು? ಪ್ರಯೋಗ ಟಿಪ್ಪಣಿಯನ್ನು ಪರಿಸರ ಪುಸ್ತಕದಲ್ಲಿ ಬರೆಯಿರಿ.

ಜೀವದ ಉಳಿವಿಗೆ ಅತ್ಯಗತ್ಯವಾದ ಘಟಕಗಳಲ್ಲಿ ನೀರೂ ಒಂದು. ನಮ್ಮ ಅಗತ್ಯಕ್ಕೆ ಬೇಕಾದಷ್ಟು ನೀರು ನಮ್ಮ ಭೂಮಿಯಲ್ಲಿದೆ. ಆದರೆ ಜಾಗರೂಕತೆಯಿಂದ ಬಳಸಬೇಕಷ್ಟೆ. ನೀರನ್ನು ಪೋಲು ಮಾಡದೆ ಅಗತ್ಯಕ್ಕೆ ಬೇಕಾದಷ್ಟು ಮಾತ್ರ ಉಪಯೋಗಿಸಲು ನಮ್ಮಿಂದ ಸಾಧ್ಯವಾಗಬೇಕು. ಒಂದೊಂದು ಹನಿ ನೀರೂ ಅಮೂಲ್ಯವಾಗಿದೆ.

### ಕುಡಿಯುವ ನೀರಿನ ಶುದ್ಧೀಕರಣ



ನೀರನ್ನು ಶುದ್ಧೀಕರಿಸಲು ಸಾಮಾನ್ಯವಾಗಿ ಬ್ಲೀಚಿಂಗ್ ಪೌಡರನ್ನು ಉಪಯೋಗಿಸುತ್ತಾರೆ. ಬಾವಿಯ ನೀರನ್ನು ತಿಂಗಳಿಗೊಮ್ಮೆಯಾದರೂ ಶುದ್ಧೀಕರಿಸಬೇಕು. ಎರಡಾಳಿನಷ್ಟು ನೀರಿರುವ ಬಾವಿಗೆ ಒಂದು ಬೆಂಕಿಪೆಟ್ಟಿಗೆಯಲ್ಲಿ ಹಿಡಿಯುವಷ್ಟು ಬ್ಲೀಚಿಂಗ್ ಪೌಡರ್ ಸಾಕಾಗಬಹುದು. ಒಂದು ಗ್ಲಾಸು ನೀರಿನಲ್ಲಿ ಒಂದು ಬೆಂಕಿಪೆಟ್ಟಿಗೆಯಲ್ಲಿ ಹಿಡಿಯುವಷ್ಟು ಪ್ರಮಾಣದ ಬ್ಲೀಚಿಂಗ್ ಪೌಡರನ್ನು ಕದಡಿರಿ. ಅದರ ತಿಳಿನೀರನ್ನು ಬಾವಿಗೆ ಎರೆಯಿರಿ. ನೀರೆತ್ತುವ ಬಾಲ್ದಿಯನ್ನುಪಯೋಗಿಸಿ ಬಾವಿಯ ನೀರನ್ನು ಚೆನ್ನಾಗಿ ಕದಡಿರಿ. ಮರುದಿನದಿಂದಲೇ ಬಾವಿಯ ನೀರನ್ನು ಉಪಯೋಗಿಸಬಹುದು. ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಿ ಬ್ಲೀಚಿಂಗ್ ಪೌಡರ್ ಲಭಿಸುವುದು. ಬ್ಲೀಚಿಂಗ್ ಪೌಡರ್ ಅಗತ್ಯಕ್ಕಿಂತ ಹೆಚ್ಚಾದರೆ ಅದು ಹಾನಿಕರ ಎಂಬುದನ್ನು ಮರೆಯದಿರಿ.

## ಜಲಾಶಯಗಳನ್ನು ಮಲಿನಗೊಳಿಸದಿರಿ...

ಎಷ್ಟೊಂದು ನೀರು ನಮ್ಮ ಭೂಮಿಯಲ್ಲಿದೆ! ಸಮುದ್ರದ ನೀರನ್ನು ನಮಗೆ ಕುಡಿಯಲು ಸಾಧ್ಯವಿಲ್ಲವಲ್ಲವೇ? ಆದರೆ ಕೆರೆಗಳ ಮತ್ತು ಹೊಳೆಗಳ ನೀರು ಶುದ್ಧವಾಗಿದ್ದ ಕಾಲವೊಂದಿತ್ತು. ಇಂದು ಅವುಗಳೆಲ್ಲವೂ ಮಲಿನಗೊಳ್ಳುತ್ತಿವೆ.



ನಿಮ್ಮ ಮನೆಯ ಸಮೀಪವಿರುವ ಹೊಳೆ ಯಾವುದು?

ಅದರ ನೀರು ಶುದ್ಧವಾಗಿದೆಯೇ?

ಯಾವೆಲ್ಲ ಮಾಲಿನ್ಯಗಳು ಹೊಳೆಗೆ ಹರಿದು ಬರುತ್ತವೆ?
ಪ್ರತಿದಿನವೂ ಚರಂಡಿಗಳ ಮೂಲಕ ಎಷ್ಟು ಮಾಲಿನ್ಯಗಳು ಹೊಳೆಗೆ ಹರಿದು ಬರುತ್ತವೆ?

ಜಲಾಶಯಗಳ ಮಾಲಿನ್ಯವು ಜೀವಜಾಲಗಳ ಅಸ್ತಿತ್ವಕ್ಕೆ ಅಪಾಯಕಾರಿಯಾಗಿದೆ.
ಜಲಾಶಯಗಳನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ

ಆಗಸದಲ್ಲಿ ಕಾರ್ಮೋಡಗಳು ಕವಿಯುತ್ತಿವೆ...


ಹಿತವಾದ ತಂಗಾಳಿ ಬೀಸುತ್ತಿದೆ...

ಕಪ್ಪೆಗಳು ವಟಗುಟ್ಟತೊಡಗಿವೆ...

ಇದೋ ಮತ್ತೊಂದು ಮಳೆಯು ಬರುತಿದೆ...

ಆ ಮಳೆಯನ್ನು ನಾವಿಂದು ಸ್ವಾಗತಿಸೋಣ...






## ಕಲಿಕೆಯ ಪ್ರಧಾನ ಸಾಧನೆಗಳು

- ತನ್ನ ಪರಿಸರದಲ್ಲಿರುವ ಜಲ ಮೂಲಗಳು ಯಾವುದೆಂಬುದನ್ನು ಹೇಳಲು ಸಾಧ್ಯವಾಗುತ್ತದೆ.
- ನೀರನ್ನು ಯಾವೆಲ್ಲ ಅಗತ್ಯಗಳಿಗಾಗಿ ಉಪಯೋಗಿಸುತ್ತಾರೆ ಎಂದು ಹೇಳಲು ಸಾಧ್ಯವಾಗುತ್ತದೆ.
- ಜಲಕ್ಷಾಮದಿಂದ ಉಂಟಾಗುವ ಸಮಸ್ಯೆಗಳನ್ನು ದಾಖಲಿಸಲು ಸಾಧ್ಯವಾಗುತ್ತದೆ.
- ನೀರು ಪೋಲಾಗುವ ಸಂದರ್ಭಗಳನ್ನು ಕಂಡುಹಿಡಿದು ಹೇಳಲು ಮತ್ತು ಪರಿಹಾರೋಪಾಯಗಳನ್ನು ಸೂಚಿಸಲು ಸಾಧ್ಯವಾಗುತ್ತದೆ.
- ಪ್ರಕೃತಿಯ ವರದಾನವಾದ ನೀರು ಅಮೂಲ್ಯವಾಗಿದೆ ಎಂಬುದನ್ನು ತಿಳಿದು ಜಲಸಂರಕ್ಷಣೆಯ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುತ್ತದೆ.
- ಅಮೂಲ್ಯವಾದ ಜಲವನ್ನು ನಾವು ಸಂರಕ್ಷಿಸಬೇಕೆಂಬ ಆಶಯವನ್ನು ಜನರಿಗೆ ತಲುಪಿಸುವ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುತ್ತದೆ.
- ಬಾವಿಯ ನೀರು ಮಲಿನವಾಗದಂತಿರಲು ಏನು ಮಾಡಬೇಕು ಎಂಬುದನ್ನು ಸೂಚಿಸಲು ಸಾಧ್ಯವಾಗುತ್ತದೆ.
- ಮೂರು ಚಟ್ಟಿಯ ಜರಡೆಯನ್ನು ಉಪಯೋಗಿಸಿ ಕೆಸರುನೀರನ್ನು ತಿಳಿಗೊಳಿಸಲು ಸಾಧ್ಯವಾಗುತ್ತದೆ.
- ನೀರನ್ನು ಶುದ್ಧೀಕರಿಸುವ ಕೆಲವು ವಿಧಾನಗಳನ್ನು ಸೂಚಿಸಲು ಸಾಧ್ಯವಾಗುತ್ತದೆ.

## ಮೌಲ್ಯಮಾಪನ ಮಾಡೋಣ

1. ರುಚಿ, ವಾಸನೆ ಮತ್ತು ಬಣ್ಣವಿಲ್ಲದ ಎರಡು ಪದಾರ್ಥಗಳು ಯಾವುವು?

   A ನೀರು, ಹಾಲು

   B ಮಜ್ಜಿಗೆ, ಹಾಲು

   C ನೀರು, ವಾಯು

   D ವಾಯು, ಮಜ್ಜಿಗೆ

2. ಮಳೆಗಾಲಕ್ಕೆ ಸಂಬಂಧಿಸದ ಹೇಳಿಕೆ ಯಾವುದು?


   A ಹೊಳೆಗಳು ತುಂಬುತ್ತವೆ.

   B ಗುಡುಗು, ಮಿಂಚು ಉಂಟಾಗುತ್ತವೆ.

   C ಮಣ್ಣಿನ ಕೊರೆತ ಉಂಟಾಗುತ್ತದೆ.

   D ಕೆರೆಗಳು ಬತ್ತಿ ಹೋಗುತ್ತವೆ.

3. ಚಿತ್ರಗಳನ್ನು ನಿರೀಕ್ಷಣೆ ಮಾಡಿರಿ.



   ನೀರು ಹೆಚ್ಚು ಪೋಲಾಗದಂತೆ ಬಳಸಲು ಯೋಗ್ಯವಾದುದು ಯಾವುದು? ಯಾಕೆ? ✓ಹಾಕಿರಿ.

## ಮುಂದುವರಿದ ಚಟುವಟಿಕೆಗಳು

1. ನೀರಿಗೆ ಆಕಾರವಿದೆಯೇ? ಒಮ್ಮೆ ಪರೀಕ್ಷಿಸಿ ನೋಡಿರಿ.

   ವಿಭಿನ್ನ ಆಕಾರದಲ್ಲಿರುವ ಲೋಟಗಳನ್ನು ಮತ್ತು ಬಾಟಲಿಗಳನ್ನು ತೆಗೆದುಕೊಳ್ಳಿರಿ. ಗ್ಲಾಸಿನಲ್ಲಿ ತುಂಬಿಸಿದ ನೀರನ್ನು ಪ್ರತಿಯೊಂದು ಪಾತ್ರೆಗೂ ಬದಲಾಯಿಸಿ ಎರೆದು ನೋಡಿರಿ. ಏನನ್ನು ಕಾಣುವಿರಿ? ಹೀಗೆ ಕಾಣಲು ಕಾರಣವೇನು?

2. ಗಂಜಿನೀರು, ಕೆಸರುನೀರು, ಶುದ್ಧನೀರು – ಇವುಗಳನ್ನು ಗಾಜಿನ ಲೋಟಗಳಲ್ಲಿ ತೆಗೆದುಕೊಳ್ಳಿರಿ. ಒಂದು ದಿನಪತ್ರಿಕೆಯ ಶೀರ್ಷಿಕೆಯಿರುವ ಭಾಗವನ್ನು ಕತ್ತರಿಸಿ ತೆಗೆದು ಮೂರು ಲೋಟಗಳ ಹೊರಭಾಗಕ್ಕೆ ಒತ್ತಿ ಇರಿಸಿ ಓದಲು ಪ್ರಯತ್ನಿಸಿರಿ. ಸಾಧ್ಯವಾಗುತ್ತದೆಯೇ? ಯಾವ ವಿಶೇಷತೆಯನ್ನು ಕಾಣುವಿರಿ?

3. ಜಲಸಂರಕ್ಷಣೆಗೆ ಸಂಬಂಧಿಸಿದ ಭಿತ್ತಿಪತ್ರ ರಚಿಸಿ ಶಾಲೆ ಹಾಗೂ ಪರಿಸರಗಳಲ್ಲಿ ಹಚ್ಚಿರಿ.

4

# ಶುಚಿತ್ವ ನಮ್ಮ ಶಕ್ತಿ



"ಇಲಿಮಾವಾ ಎಲ್ಲಿಗೆ ಪ್ರಯಾಣ?"

"ನಾನು ಈ ಊರನ್ನು ಬಿಟ್ಟು ಹೋಗುತ್ತಿದ್ದೇನೆ ನುಸಿಯಣ್ಣಾ."


''ಏನಾಯಿತು?''

'' ಈ ಶುಚಿಯಾದ ಊರಿನಲ್ಲಿ ನಮ್ಮ ಹಾಗಿರುವವರು ಜೀವಿಸುವುದಾದರೂ ಹೇಗೆ? ಹಸಿದು ಬದುಕಲು ಇನ್ನು ಸಾಧ್ಯವಿಲ್ಲ.''

"ಹೌದು, ಮೊಟ್ಟೆಯಿಡಲು ಕಟ್ಟಿ ನಿಂತಿರುವ ಒಂದು ಹನಿ ನೀರು ಕೂಡಾ ಕಾಣಿಸುತ್ತಿಲ್ಲ. ಬದುಕಲು ಕಷ್ಟವಾಗಿ ಗೆಳೆಯರೆಲ್ಲಾ ಊರನ್ನು ತೊರೆದರು. ನಾನೂ ಅವರೊಂದಿಗೆ ಹೋಗುತ್ತೇನೆ."

''ನನ್ನ ಸ್ಥಿತಿಯೂ ಕಷ್ಟವೇ. ನಾನೂ ಬರುತ್ತೇನೆ.''

ಮಣಿಯನ್ ನೊಣವೂ ಜೊತೆ ಸೇರಿತು.



"ಹೋ... ಇಲ್ಲಿಗೆ ತಲುಪಿದುದು ಭಾಗ್ಯ, ಕೆಲವೇ ದಿನಗಳಲ್ಲಿ ಶರೀರವು ಉತ್ತಮವಾಯಿತು. ಅಲ್ವೇ ... ನುಸಿಯಣ್ಣಾ?"

" ಹೌದು, ಹೌದು, ಬೇಕಾದಷ್ಟು ಆಹಾರ, ನಮಗೆ ವಾಸಿಸಲು ಸರಿಯಾದ ಸ್ಥಳ."


"ಇನ್ನು ನಾವು ಎಲ್ಲಿಗೂ ಹೋಗುವುದು ಬೇಡ. ಇಲ್ಲಿಯೇ ಸುಖವಾಗಿ ಇರೋಣ," ಮಣಿಯನ್ ನೊಣ ಸಂತೋಷದಿಂದ ಹೇಳಿತು.

ಚಿತ್ರದಲ್ಲಿರುವ ಎರಡು ಹಳ್ಳಿಗಳನ್ನು ನೀವು ನೋಡಿದಿರಲ್ಲವೇ? ಇವುಗಳಲ್ಲಿ ನೀವು ವಾಸಿಸಲು ಇಚ್ಛಿಸುವ ಹಳ್ಳಿ ಯಾವುದು? ಯಾಕೆ?

ಉತ್ತಮ ಆರೋಗ್ಯದಿಂದ ಬೆಳೆಯಬೇಕಾದರೆ ನಮ್ಮ ಪರಿಸರವು ಶುಚಿಯಾಗಿರಬೇಕು.

ಮಲಿನ ಪ್ರದೇಶಗಳಲ್ಲಿ ಸೊಳ್ಳೆ, ನೊಣ, ಇಲಿ ಮೊದಲಾದ ಜೀವಿಗಳು ಹೆಚ್ಚಾಗುತ್ತವೆ. ಈ ರೀತಿಯ ಜೀವಿಗಳು ಹಲವು ರೋಗಗಳನ್ನು ಹರಡುತ್ತವೆ.

ಕಟ್ಟಿನಿಂತ ನೀರಿನಲ್ಲಿ ಸೊಳ್ಳೆ ಮೊಟ್ಟೆಯಿಡುತ್ತದೆ. ಮೊಟ್ಟೆಯೊಡೆದು ಮರಿಗಳು ಪೂರ್ಣವಾಗಿ ಬೆಳವಣಿಗೆಹೊಂದಲು ಎಂಟು ದಿವಸಗಳು ಬೇಕು. ಮನುಷ್ಯನ ರಕ್ತವನ್ನು ಕುಡಿಯುವ ಸೊಳ್ಳೆಗಳು ಹಲವಾರು ರೋಗಗಳನ್ನು ಹರಡುತ್ತವೆ. ಮಲೇರಿಯಾ, ಡೆಂಗ್ಯೂಜ್ವರ, ಚಿಕೂನ್‌ಗುನ್ಯ ಮೊದಲಾದ ರೋಗಗಳನ್ನು ಸೊಳ್ಳೆ ಹರಡುವುದು.





ನೊಣವು ನಮ್ಮ ಪರಿಸರದಲ್ಲಿ ಕಂಡುಬರುವ ಒಂದು ಚಿಕ್ಕ ಜೀವಿಯಾಗಿದೆ. ಮಾಲಿನ್ಯವಿರುವ ಸ್ಥಳಗಳಲ್ಲಿಯೂ, ಕೊಳೆತ ವಸ್ತುಗಳಲ್ಲಿಯೂ ಈ ಜೀವಿಗಳನ್ನು ಕಾಣಬಹುದು. ಸಿಹಿಯಾದ ಮತ್ತು ತೆರೆದಿರಿಸಿದ ಆಹಾರವಸ್ತುಗಳಲ್ಲಿ ನೊಣ ಕುಳಿತು ಕೊಳ್ಳುವುದು. ಬೇಧಿ, ಕೊಲೆರಾ ಮೊದಲಾದ ರೋಗಗಳನ್ನು ಈ ಚಿಕ್ಕ ಜೀವಿಯು ಹರಡುವುದು.

ಅಟ್ಟಗಳಲ್ಲಿಯೂ, ಬಿಲಗಳಲ್ಲಿಯೂ ನೀವು ಇಲಿಗಳನ್ನು ಕಂಡಿರಬಹುದು. ಕಣ್ಣಿಗೆ ಕಂಡದ್ದೆಲ್ಲವನ್ನು ಈ ಜಾಣರು ಕೆರೆದು, ತುಂಡರಿಸಿ ನಾಶಪಡಿಸುವರು. ಅಡುಗೆ ಮನೆಗೂ, ಉಗ್ರಾಣಕ್ಕೂ ಆಹಾರವಸ್ತುಗಳನ್ನು ಹುಡುಕಿ ಇಲಿ ತಲುಪುವುದು. ಇಲಿಯ ವಿಸರ್ಜ್ಯಗಳು ಆಹಾರವಸ್ತುಗಳಲ್ಲಿ ಬೀಳುವುದರಿಂದ ಹಲವಾರು ರೋಗಗಳು ಬರಲು ಸಾಧ್ಯತೆಯಿದೆ. ಇಲಿಜ್ವರ, ಪ್ಲೇಗ್ ಮೊದಲಾದ ರೋಗಗಳನ್ನು ಇಲಿ ಹರಡುವುದು.




ಸೊಳ್ಳೆ, ನೊಣ, ಇಲಿ ಮೊದಲಾದ ಜೀವಿಗಳು ಹೆಚ್ಚಾದರೆ ಉಂಟಾಗುವ ದೋಷಗಳನ್ನು ಯೋಚಿಸಿರಿ.

ನಮ್ಮ ಕಣ್ಣಿಗೆ ಕಾಣಿಸದವುಗಳೂ ಸೇರಿದಂತೆ ರೋಗಗಳಿಗೆ ಕಾರಣವಾಗುವ ಅನೇಕ ಜೀವಿಗಳಿವೆ. ಇಂತಹ ಜೀವಿಗಳು ವೃದ್ಧಿಯಾಗುವುದನ್ನು ನಿಯಂತ್ರಿಸಲು ನಾವು ಗಮನಿಸಬೇಕು. ಇದಕ್ಕಾಗಿ ನಾವು ಏನೆಲ್ಲ ಮಾಡಬಹುದು?

- ಕಸಕಡ್ಡಿಗಳನ್ನು ರಾಶಿಯಾಗಲು ಬಿಡಬಾರದು.
- ನೀರು ಕಟ್ಟಿ ನಿಲ್ಲಲು ಬಿಡಬಾರದು.
- ವ್ಯಕ್ತಿಶುಚಿತ್ವವನ್ನು ಪಾಲಿಸಬೇಕು.
- ಮನೆ, ಶಾಲೆ, ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿ ಇರಿಸಬೇಕು.
- ನಾವು ಸೇವಿಸುವ ಆಹಾರ ಮತ್ತು ನೀರು ಶುಚಿಯಾಗಿರಬೇಕು.
- 
- 

Edubuntu-School Resources – 'ಶುಚಿತ್ವ ಮನೆಯಲ್ಲೂ ಊರಿನಲ್ಲೂ' ನೋಡಿರಿ.




? ಸೊಳ್ಳೆ ನಿರ್ಮೂಲನಕ್ಕಾಗಿರುವ 'ಡ್ರೈಡೇ'ಯ ಕುರಿತು ನಿಮಗೆ ತಿಳಿದಿದೆಯೇ?

## ಡ್ರೈಡೇ

ಕಟ್ಟಿ ನಿಂತಿರುವ ನೀರಿನಲ್ಲಿ ಮೊಟ್ಟೆಯಿರಿಸಿ ಸೊಳ್ಳೆಗಳು ವೃದ್ಧಿಸುವುದಲ್ಲವೇ? ಮೊಟ್ಟೆ ಬಿರಿದು ಎಂಟು ದಿನಗಳಲ್ಲಿ ಸೊಳ್ಳೆ ಪೂರ್ಣ ಬೆಳವಣಿಗೆ ಹೊಂದುವುದು. ನಮ್ಮ ಪರಿಸರದಲ್ಲಿ ಗೆರಟೆ, ಎಸೆದ ಪಾತ್ರೆಗಳು, ಟಯರು, ಬಾಟಲಿ, ಆಟಿಕೆಗಳು ಮೊದಲಾದ ನೀರು ಕಟ್ಟಿನಿಲ್ಲಬಹುದಾದ ಅನೇಕ ವಸ್ತುಗಳಿವೆ. ಇವುಗಳಲ್ಲಿ ಸೊಳ್ಳೆಗಳು ಮೊಟ್ಟೆಯಿಡುವ ಸಾಧ್ಯತೆಯಿದೆ. ಆದುದರಿಂದ ಪ್ರತಿ ಏಳು ದಿನಗಳಿಗೊಮ್ಮೆ ಇವುಗಳಲ್ಲಿ ಕಟ್ಟಿನಿಂತಿರುವ ನೀರನ್ನು ಚೆಲ್ಲಬೇಕು. ಹೀಗೆ ಸೊಳ್ಳೆಗಳು ಉಂಟಾಗುವ ಸಂದರ್ಭಗಳನ್ನು ನಿವಾರಿಸಬಹುದು. ನಮ್ಮ ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ನಡೆಸುವ ಈ ಚಟುವಟಿಕೆಯು 'ಡ್ರೈಡೇ' ಎಂಬ ಹೆಸರಿನಲ್ಲಿ ತಿಳಿಯಲ್ಪಡುತ್ತದೆ. ಸೊಳ್ಳೆಯ ಕುರಿತಾಗಿರುವ ಕೆಲವು ಗಾದೆಮಾತುಗಳನ್ನು ನೋಡಿರಿ.



- ಸೊಳ್ಳೆ ಒಂದು, ಕಾಯಿಲೆ ನೂರೊಂದು
- ಸೊಳ್ಳೆ ಕಚ್ಚಿದರೆ ವೈದ್ಯನೂ ರೋಗಿ
- ಶುಚಿಯಿಲ್ಲದ ಊರಿಗೆ ಸೊಳ್ಳೆಯೇ ರಾಜ




## ನೀರಿನ ಮೂಲಕವೂ ರೋಗ

ನೀರಿನ ಮೂಲಕವೂ ರೋಗಗಳು ಹರಡುವ ಸಾಧ್ಯತೆಯಿದೆ. ನಮ್ಮ ಪರಿಸರದಲ್ಲಿರುವ ಮಲಿನ ನೀರು ಮತ್ತು ನಾವು ಕುಡಿಯುವ ಅಶುದ್ಧ ನೀರಿನ ಮೂಲಕ ರೋಗಗಳು ಬರುವುದು. ಬೇಧಿ, ಹೊಟ್ಟೆ ನೋವು, ಹಳದಿಕಾಮಾಲೆ, ಕೊಲೆರಾ, ಟೈಫೋಯ್ಡ್ ಮೊದಲಾದ ರೋಗಗಳು ನೀರಿನ ಮೂಲಕ ಹರಡುವುದು.

ನೀರಿನ ಮೂಲಕ ರೋಗಗಳು ಹರಡದಿರಲು ನಾವು ಗಮನಿಸಬೇಕಾದ ವಿಷಯಗಳು ಯಾವುವು?



- ಕುಡಿಯಲು ಶುದ್ಧ ನೀರನ್ನು ಅಥವಾ ಕುದಿಸಿ ತಣಿಸಿದ ನೀರನ್ನು ಬಳಸಬೇಕು.
- ಮಲಿನ ನೀರು ಕಟ್ಟಿ ನಿಲ್ಲಲು ಬಿಡಬಾರದು.
- ತೆರೆದಿರಿಸಿದ ಅಥವಾ ಹಳಸಿದ ಪಾನೀಯಗಳನ್ನು ಕುಡಿಯಬಾರದು.






- ಕುಡಿಯುವ ನೀರಿನ ಮೂಲಗಳು ಶುಚಿಯಾಗಿವೆಯೆಂದು ಖಚಿತಪಡಿಸಬೇ
-

## ಪಾನೀಯ ಚಿಕಿತ್ಸೆ

ಬೇಧಿಯೇ ಮೊದಲಾದ ರೋಗಗಳು ಬಂದರೆ ಶರೀರದಲ್ಲಿರುವ ನೀರಿನ ಅಂಶವು ಅಧಿಕ ಪ್ರಮಾಣದಲ್ಲಿ ನಷ್ಟವಾಗುವುದು. ನಷ್ಟವಾದ ನೀರಿನ ಅಂಶವನ್ನು ಶರೀರಕ್ಕೆ ತುಂಬಲು ಪಾನೀಯ ಚಿಕಿತ್ಸೆ ನೀಡಬೇಕು.

- ಉಪ್ಪು ಹಾಕಿದ ಗಂಜಿನೀರು
- ಉಪ್ಪು ಹಾಗೂ ಸಕ್ಕರೆ ಹಾಕಿದ ಲಿಂಬೆ ಶರಬತ್ತು
- ಉಪ್ಪು ಹಾಕಿದ ಮಜ್ಜಿಗೆ
- ಎಳನೀರು

ಇವುಗಳನ್ನು ಕುಡಿಯಲು ಕೊಡಬೇಕು.

ಶುಚಿತ್ವ ಇಲ್ಲದಿರುವುದೇ ಕೆಲವು ರೋಗಗಳಿಗೆ ಕಾರಣವಾಗಿದೆ. ವ್ಯಕ್ತಿ ಶುಚಿತ್ವವು ಪರಿಸರ ಶುಚಿತ್ವದಷ್ಟೇ ಮುಖ್ಯವಾಗಿದೆ. ನಾವು ಪಾಲಿಸಬೇಕಾದ ಶುಚಿತ್ವ ಅಭ್ಯಾಸಗಳು ಯಾವುವು?



- ಪ್ರತಿದಿನವೂ ಸ್ನಾನ ಮಾಡಬೇಕು.
- ಉಗುರು ತೆಗೆಯಬೇಕು.
- ಆಹಾರ ಸೇವಿಸುವ ಮೊದಲು ಮತ್ತು ಬಳಿಕ ಕೈ, ಬಾಯಿಗಳನ್ನು ತೊಳೆಯಬೇಕು.
- ಪಾಯಿಖಾನೆಯಿಂದ ಬಂದ ಬಳಿಕ ಕೈಗಳನ್ನು ಸಾಬೂನು ಉಪಯೋಗಿಸಿ ತೊಳೆಯಬೇಕು.
- ಬೆಳಗ್ಗೆ ಮತ್ತು ರಾತ್ರಿ ಹಲ್ಲುಜ್ಜಬೇಕು.
- ಶುಚಿಯಾದ ಬಟ್ಟೆಗಳನ್ನು ಧರಿಸಬೇಕು.
- 

ವ್ಯಕ್ತಿಶುಚಿತ್ವವನ್ನು ಮಾತ್ರ ಗಮನಿಸಿದರೆ ಸಾಲದು; ಮನೆ, ಶಾಲೆ ಮತ್ತು ಸಾರ್ವಜನಿಕ ಸ್ಥಳಗಳನ್ನೂ ಶುಚಿಯಾಗಿರಿಸಬೇಕು.

ಪರಿಸರವನ್ನು ಶುಚಿಯಾಗಿರಿಸಲು ನಾವೇನು ಮಾಡಬಹುದು?

- ಕಸಕಡ್ಡಿಗಳನ್ನು ಅಲ್ಲಲ್ಲಿ ಎಸೆಯಬಾರದು.
- ಪಾಯಿಖಾನೆಗಳಲ್ಲಿಯೇ ಮಲ ವಿಸರ್ಜಿಸಬೇಕು.
- ಮೂತ್ರದೊಡ್ಡಿಯಲ್ಲಿಯೇ ಮೂತ್ರ ವಿಸರ್ಜಿಸಬೇಕು.
- ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬಾರದು.
- ತಿಂದುಳಿದ ಆಹಾರವಸ್ತುಗಳನ್ನು ಕಂಡಕಂಡಲ್ಲಿ ಎಸೆಯಬಾರದು.
- 



## ಶುಚಿತ್ವವನ್ನು ಪಾಲಿಸಲು ನಾನು ಮಾಡುವುದು

ಶುಚಿತ್ವಕ್ಕೆ ಸಂಬಂಧಿಸಿ ಕೆಳಗೆ ಹೇಳಿರುವವುಗಳಲ್ಲಿ ನೀವು ಮಾಡುವ ಚಟುವಟಿಕೆಗಳ ಎದುರು ಸರಿ (✓) ಗುರುತನ್ನು ಹಾಕಿರಿ.

- ಪ್ರತಿದಿನ ಎರಡು ಹೊತ್ತು ಹಲ್ಲುಜ್ಜುತ್ತೇನೆ. ☐
- ಪ್ರತಿದಿನವೂ ಸ್ನಾನ ಮಾಡುತ್ತೇನೆ. ☐
- ಸ್ನಾನದ ಬಳಿಕ ಶರೀರವನ್ನು ಚೆನ್ನಾಗಿ ಒರೆಸಿ ಶುಚಿಗೊಳಿಸುತ್ತೇನೆ. ☐
- ದಿನವೂ ಶುಚಿಯಾದ ಬಟ್ಟೆಗಳನ್ನು ಧರಿಸುತ್ತೇನೆ. ☐
- ಕುದಿಸಿ ತಣಿಸಿದ ನೀರನ್ನು ಕುಡಿಯುತ್ತೇನೆ. ☐
- ಹೊರಗೆ ಹೋಗುವಾಗ ಚಪ್ಪಲಿ ಧರಿಸುತ್ತೇನೆ. ☐
- ಪಾಯಿಖಾನೆಯಿಂದ ಹಿಂದಿರುಗಿದ ಬಳಿಕ ಕೈಗಳನ್ನು ಸಾಬೂನು ಹಾಕಿ ತೊಳೆಯುತ್ತೇನೆ. ☐
- ಮೂತ್ರದೊಡ್ಡಿಯಲ್ಲಿಯೇ ಮೂತ್ರ ಮಾಡುತ್ತೇನೆ. ☐
- ಶುಚಿಯಾದ ಪಾತ್ರೆಗಳಲ್ಲಿ ಆಹಾರ ಸೇವಿಸುತ್ತೇನೆ. ☐
- ಆಟವಾಡಿದ ಬಳಿಕ ಕೈ, ಕಾಲು, ಮುಖಗಳನ್ನು ತೊಳೆಯುತ್ತೇನೆ. ☐
- ಉಗುರು ಕತ್ತರಿಸಿ ಶುಚಿಯಾಗಿರಿಸುತ್ತೇನೆ. ☐
- ಆಹಾರ ಸೇವಿಸುವ ಮೊದಲು ಹಾಗೂ ಬಳಿಕ ಕೈ, ಬಾಯಿ ತೊಳೆದು ಶುಚಿಗೊಳಿಸುತ್ತೇನೆ. ☐
- ಬೇಡದ ವಸ್ತುಗಳನ್ನು ನಿರ್ದಿಷ್ಟ ಸ್ಥಳದಲ್ಲಿ ಹಾಕುತ್ತೇನೆ. ☐

## ಆರೋಗ್ಯ ಕ್ಲಬ್

ನಂದಪುರ ಸರಕಾರಿ ಎಲ್.ಪಿ. ಶಾಲೆಯ ಆರೋಗ್ಯ ಕ್ಲಬ್ ನಡೆಸಿದ ಚಟುವಟಿಕೆಗಳನ್ನು ನೋಡಿರಿ.

- ಎಲ್ಲ ವಾರಗಳಲ್ಲಿಯೂ ಡ್ರೈಡೇ ಆಚರಿಸುವುದು.
- ಅರಿವು ಮೂಡಿಸುವ ಭಿತ್ತಿಪತ್ರ ರಚನೆ.
- ಪ್ರತಿ ತರಗತಿಯಲ್ಲಿಯೂ ಆರೋಗ್ಯ ಚಾರ್ಟ್
- ವ್ಯಾಯಾಮ ತರಬೇತಿ
- ಶಾಲೆ ಹಾಗೂ ಪರಿಸರದಲ್ಲಿ ಕಸದ ಬುಟ್ಟಿಗಳನ್ನು ಇರಿಸುವುದು.

- ವ್ಯಾಯಾಮ ತರಬೇತಿ
- ಶಾಲೆ ಹಾಗೂ ಪರಿಸರದಲ್ಲಿ ಕಸದ ಬುಟ್ಟಿಗಳನ್ನು ಇರಿಸುವುದು.
- ಶುಚಿತ್ವ ಸಮೀಕ್ಷೆ
- ಆರೋಗ್ಯ ಹಸ್ತಪತ್ರಿಕೆಯ ತಯಾರಿ

ನಿಮ್ಮ ಶಾಲೆಯಲ್ಲಿಯೂ ಆರೋಗ್ಯ ಕ್ಲಬ್ ಇದೆಯಲ್ಲವೇ? ನೀವು ನಡೆಸುವ ಚಟುವಟಿಕೆಗಳು ಯಾವುವು?

## ಭಿತ್ತಿಪತ್ರ ತಯಾರಿಸೋಣ




ನಂದಪುರ ಸರಕಾರಿ ಎಲ್. ಪಿ. ಶಾಲೆಯ ಗೆಳೆಯರು ರಚಿಸಿದ ಕೆಲವು ಭಿತ್ತಿಪತ್ರಗಳನ್ನು ನೋಡಿರಿ.




ಇದೇ ರೀತಿಯಲ್ಲಿ ಶಾಲೆ ಹಾಗೂ ಪರಿಸರದಲ್ಲಿ ಹಚ್ಚಲು ಭಿತ್ತಿಪತ್ರಗಳನ್ನು ತಯಾರಿಸಿರಿ.

## ವಾರ್ತೆಗಳು


ಪತ್ರಿಕೆಗಳಲ್ಲಿ ಬರುವ ಕೆಲವು ವಾರ್ತೆಗಳ ಶೀರ್ಷಿಕೆಗಳನ್ನು ಗಮನಿಸಿರಿ.

ಈ ರೀತಿಯ ವಾರ್ತೆಗಳು ಬರಲು ಕಾರಣವೇನು?


ಶುಚಿಯಾಗಿರುವ ಒಂದು ಊರಿನಿಂದ ಈ ರೀತಿಯ ವಾರ್ತೆಗಳು ಬರಬಹುದೇ?

ನಮ್ಮ ಊರಿನಿಂದ ಈ ರೀತಿಯ ವಾರ್ತೆಗಳು ಬಾರದಂತೆ ನಾವು ಏನೆಲ್ಲ ಗಮನಿಸಬೇಕು?

- ನಾವು ಪ್ರತಿಯೊಬ್ಬರೂ ಶುಚಿತ್ವವನ್ನು ಪಾಲಿಸಬೇಕು.




- ಮನೆ ಹಾಗೂ ಪರಿಸರವನ್ನು ಶುಚಿಯಾಗಿರಿಸಬೇಕು.
- ಸಾರ್ವಜನಿಕ ಸ್ಥಳಗಳಲ್ಲಿ ಶುಚಿತ್ವವನ್ನು ಪಾಲಿಸಬೇಕು.



## ಕಲಿಕೆಯ ಪ್ರಧಾನ ಸಾಧನೆಗಳು

- ಸೊಳ್ಳೆ, ನೊಣ, ಇಲಿ ಮೊದಲಾದುವುಗಳು ಹೆಚ್ಚಾಗುವ ಸಂದರ್ಭಗಳನ್ನು ಹಾಗೂ ಅದರಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ಹೇಳಲು ಸಾಧ್ಯವಾಗುವುದು.
- ಮನೆಯನ್ನು ಹಾಗೂ ಪರಿಸರವನ್ನು ಶುಚಿಯಾಗಿಡಲು ನಾವು ಯಾವುದನ್ನೆಲ್ಲ ಗಮನಿಸಬೇಕೆಂದು ಹೇಳಲು ಸಾಧ್ಯವಾಗುವುದು.
- ಸೊಳ್ಳೆ ನಿರ್ಮೂಲನ ಚಟುವಟಿಕೆಗಳನ್ನು ಹೇಗೆ ನಡೆಸಬಹುದೆಂದು ಸೂಚಿಸಲು ಮತ್ತು ಸೊಳ್ಳೆ ನಿರ್ಮೂಲನ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು.
- ಆಹಾರದ ಮತ್ತು ನೀರಿನ ಮೂಲಕ ಹರಡುವ ರೋಗಗಳು ಯಾವುವೆಂದು ಹೇಳಲು ಸಾಧ್ಯವಾಗುವುದು.
- ನೊಣ, ಸೊಳ್ಳೆ, ಇಲಿ ಹಾಗೂ ನೀರಿನ ಮೂಲಕ ಹರಡುವ ರೋಗಗಳು ಬಾರದಂತೆ ತಡೆಗಟ್ಟಲು ನಾವು ಏನೆಲ್ಲ ಗಮನಿಸಬೇಕೆಂದು ಹೇಳಲು ಸಾಧ್ಯವಾಗುವುದು.
- ನಾವು ಪಾಲಿಸಬೇಕಾದ ಶುಚಿತ್ವ ಅಭ್ಯಾಸಗಳು ಯಾವುವೆಂದು ಹೇಳಲು ಸಾಧ್ಯವಾಗುವುದು.
- ಶುಚಿತ್ವ ನಮ್ಮ ಶಕ್ತಿ ಎಂಬ ಆಶಯವನ್ನು ಪ್ರಚಾರ ಮಾಡಲು ಅಗತ್ಯವಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು.
- ವ್ಯಕ್ತಿ ಶುಚಿತ್ವ ಮತ್ತು ಪರಿಸರ ಶುಚಿತ್ವವನ್ನು ಖಚಿತಪಡಿಸುವುದರಲ್ಲಿ ತನ್ನ ಪಾತ್ರವನ್ನು ಅರಿತು ಕೊಂಡು ಕಾರ್ಯಪ್ರವೃತ್ತರಾಗಲು ಸಾಧ್ಯವಾಗುವುದು.

## ಮೌಲ್ಯಮಾಪನ ಮಾಡೋಣ

ಕೆಳಗೆ ಕೊಟ್ಟಿರುವವುಗಳಲ್ಲಿ ತಪ್ಪಾದ ಹೇಳಿಕೆ ಯಾವುದು?

1. ಎ. ತೆರೆದಿರಿಸಿದ ಆಹಾರಪದಾರ್ಥಗಳನ್ನು ಸೇವಿಸಬಾರದು.
   ಬಿ. ಸಾರ್ವಜನಿಕ ಸ್ಥಳಗಳಲ್ಲಿ ಮಲ, ಮೂತ್ರಗಳನ್ನು ವಿಸರ್ಜಿಸಬಾರದು.
   ಸಿ. ಕುದಿಸಿ ತಣಿಸಿದ ನೀರನ್ನು ಕುಡಿಯಬೇಕು.
   ಡಿ. ಮಲಿನ ನೀರು ಕಟ್ಟಿ ನಿಲ್ಲುವಂತೆ ಮಾಡಬೇಕು.

2. ಒಂದು ಪ್ರದೇಶದಲ್ಲಿ ಯಾವಾಗಲೂ ರೋಗಗಳು ಹರಡುತ್ತಾ ಇರುವುದು. ಕಾರಣ ಏನಾಗಿರಬಹುದು?

ಎ. ಆಸ್ಪತ್ರೆಗಳು ಇಲ್ಲ.

ಬಿ. ಜನರಿಗೆ ಉನ್ನತ ಶಿಕ್ಷಣವಿಲ್ಲ.

ಸಿ. ಮಾಲಿನ್ಯಗಳು ರಾಶಿಬಿದ್ದು ಶುಚಿಯಿಲ್ಲದ ಪರಿಸರ.

ಡಿ. ರಸ್ತೆ, ವಿದ್ಯುತ್ ಇತ್ಯಾದಿಗಳಿಲ್ಲ.

3. ನಿಮ್ಮ ನೆರೆಮನೆಯ ಒಂದು ಮಗುವಿಗೆ ಬೇಧಿ ಉಂಟಾಯಿತು ಎಂದು ಭಾವಿಸಿರಿ. ಅವನ ನಿಶ್ಶಕ್ತಿಯನ್ನು ಹೋಗಲಾಡಿಸಲು ನೀವು ನೀಡುವ ಸಲಹೆಗಳೇನು?

4. ಟೀಚರ್ ಕೊಟ್ಟಿರುವ ಚೆಕ್‌ಲಿಸ್ಟನ್ನು ರಾಮು ಹೇಗೆ ಪೂರ್ತಿಗೊಳಿಸಿರುವನೆಂದು ನೋಡಿರಿ.

ಯಾವುದಾದರೂ ಆರೋಗ್ಯ ಸಮಸ್ಯೆ ರಾಮುವಿಗೆ ಉಂಟಾಗುವ ಸಾಧ್ಯತೆ ಇದೆಯೇ? ಇದ್ದರೆ ಯಾವುವು?

| | ನಾನು ಮಾಡುವುದು | ಇದೆ | ಇಲ್ಲ |
|---|---|---|---|
| 1. | ಕುದಿಸಿ ತಣಿಸಿದ ನೀರನ್ನೇ ಕುಡಿಯುತ್ತೇನೆ. | ✓ | |
| 2. | ದಿನವೂ ಸ್ನಾನ ಮಾಡುತ್ತೇನೆ. | ✓ | |
| 3. | ಸರಿಯಾದ ಸಮಯಕ್ಕೆ ಆಹಾರ ಸೇವಿಸುತ್ತೇನೆ. | ✓ | |
| 4. | ಅಮ್ಮ ಬಡಿಸಿದ ಆಹಾರವನ್ನು ತಣಿಯಲು ತೆರೆದಿರಿಸಿ ಆಟವಾಡಲು ಹೋಗುತ್ತೇನೆ. ಹಿಂದಿರುಗಿದ ಬಳಿಕ ಆ ಆಹಾರವನ್ನು ಸೇವಿಸುತ್ತೇನೆ. | ✓ | |



## ಮುಂದುವರಿದ ಚಟುವಟಿಕೆಗಳು

1. ಶಾಲಾ ಪರಿಸರ, ಭೋಜನಶಾಲೆ, ಮೂತ್ರದೊಡ್ಡಿ, ತರಗತಿಕೋಣೆ ಮೊದಲಾದ ಸ್ಥಳಗಳನ್ನು ಶುಚಿಯಾಗಿರಿಸಲು ಅಗತ್ಯವಾದ ಸೂಚನಾಫಲಕಗಳನ್ನು ತೂಗು ಹಾಕಿರಿ.

2. ಸೊಳ್ಳೆ ನಿರ್ಮೂಲನ ಚಟುವಟಿಕೆಗಳಲ್ಲಿ ನೀವೂ ಭಾಗವಹಿಸಿರಿ. ಡ್ರೈಡೇ ಆಚರಿಸಿರಿ.


3. ನಿಮ್ಮ ಶಾಲೆಯ ಸಮೀಪವಿರುವ ಕೆಲವು ಮನೆಗಳನ್ನು ಅಧ್ಯಾಪಿಕೆಯೊಂದಿಗೆ ಸಂದರ್ಶಿಸಿ ಅವರು ನಡೆಸಿದ ಶುಚೀಕರಣ ಚಟುವಟಿಕೆಗಳ ಮೌಲ್ಯಮಾಪನ ಮಾಡಿರಿ. ಅಗತ್ಯವಾದ ನಿರ್ದೇಶಗಳನ್ನು ಅವರಿಗೆ ನೀಡುವಿರಲ್ಲವೇ? ಸಮೀಕ್ಷೆಯಲ್ಲಿ ಕಂಡುಹಿಡಿದ ವಿಷಯಗಳನ್ನು ತರಗತಿಯಲ್ಲಿ ಚರ್ಚಿಸಿ ಪರಿಸರ ಪುಸ್ತಕದಲ್ಲಿ ಬರೆಯಿರಿ.

## ಸಮೀಕ್ಷೆಯ ನಮೂನೆ

| | ಪರೀಕ್ಷಿಸುವ ವಿಷಯಗಳು | ಪೂರ್ಣವಾಗಿ | ಸ್ವಲ್ಪವೂ ಇಲ್ಲ | ಆಂಶಿಕವಾಗಿ |
|---|---|---|---|---|
| 1. | ಬಾವಿ ಮತ್ತು ಪರಿಸರವನ್ನು ಶುಚಿಯಾಗಿರಿಸಲಾಗಿದೆ | | | |
| 2. | ತ್ಯಾಜ್ಯಗಳನ್ನು ವರ್ಗೀಕರಿಸಿ ಸಂಸ್ಕರಿಸುತ್ತಾರೆ | | | |
| 3. | ಕುದಿಸಿ ತಣಿಸಿದ ನೀರನ್ನೇ ಕುಡಿಯಲು ಉಪಯೋಗಿಸುತ್ತಾರೆ (ಶುದ್ಧನೀರು) | | | |
| 4. | ವ್ಯಕ್ತಿ ಶುಚಿತ್ವವನ್ನು ಪಾಲಿಸುತ್ತಾರೆ | | | |
| 5. | ಸಮೀಪದಲ್ಲಿರುವ ಸಾರ್ವಜನಿಕ ಸ್ಥಳಗಳನ್ನು ಶುಚಿಯಾಗಿರಿಸಲು ಗಮನಿಸುತ್ತಾರೆ. | | | |

5

# ರುಚಿಕರವೂ.... ಪೌಷ್ಟಿಕವೂ....






ಚಿತ್ರದಲ್ಲಿರುವ ಗೆಳೆಯರು ಏನು ಹೇಳುತ್ತಿದ್ದಾರೆ? ಓದಿ ನೋಡಿರಿ.

? ನಿನ್ನೆ ರಾತ್ರಿ ನೀವು ಸೇವಿಸಿದ ಆಹಾರ ವಸ್ತುಗಳು ಯಾವುವು? ಬರೆಯಿರಿ.

- ನಿಮ್ಮ ಗೆಳೆಯರು ಸೇವಿಸಿದ ಆಹಾರವಸ್ತುಗಳು ಯಾವುವು?
- ಎಲ್ಲರೂ ಒಂದೇ ಆಹಾರವಸ್ತುಗಳನ್ನು ಸೇವಿಸಿದ್ದಾರೆಯೇ? ಯಾಕೆ?
- ಅಮ್ಮನೊಂದಿಗೆ ಕೋಪಿಸಿಕೊಂಡು ಆಹಾರ ಸೇವಿಸದೆ ಮಗು ಮಲಗಿದ್ದು ಸರಿಯೇ? ನಿಮ್ಮ ಅಭಿಪ್ರಾಯವೇನು?
- ಆಹಾರ ಸೇವಿಸದೆ ಇರುವುದರಿಂದ ಅತಿಯಾದ ಹಸಿವನ್ನು ನೀವು ಅನುಭವಿಸಿದ್ದೀರಾ?
- ನಿಮಗೆ ಅತ್ಯಂತ ಇಷ್ಟವಾದ ಆಹಾರವಸ್ತುಗಳು ಯಾವುವು? ಯಾಕೆ?
- ನಾವು ಆಹಾರದಲ್ಲಿ ಮುಖ್ಯವಾಗಿ ಅಕ್ಕಿ, ಗೋಧಿ ಮೊದಲಾದ ಧಾನ್ಯಗಳನ್ನು ಬಳಸುತ್ತೇವೆ. ಇವುಗಳಲ್ಲದೆ ಬೇರೆ ಯಾವೆಲ್ಲ ಧಾನ್ಯಗಳಿವೆ?
  - ಜೋಳ
  - ರಾಗಿ
  - ಸಾಮೆಅಕ್ಕಿ
  - ನವಣೆ

ಅಕ್ಕಿ, ಗೋಧಿ ಎಂಬಿವುಗಳನ್ನು ಉಪಯೋಗಿಸಿ ನಿಮ್ಮ ಮನೆಯಲ್ಲಿ ತಯಾರಿಸುವ ಆಹಾರವಸ್ತುಗಳು ಯಾವುವು? ಕೆಳಗೆ ಕೊಟ್ಟಿರುವ ಪದಸೂರ್ಯವನ್ನು ಪೂರ್ತಿಗೊಳಿಸಿರಿ.




ನಾವು ಆಹಾರದಲ್ಲಿ ಧಾನ್ಯಗಳನ್ನು ಮಾತ್ರ ಬಳಸುತ್ತೇವೆಯೇ? ರುಚಿಯಾದ ಪದಾರ್ಥಗಳನ್ನು ತಯಾರಿಸಲು ಇನ್ನೂ ಅನೇಕ ಸಾಮಗ್ರಿಗಳಿವೆ. ತರಕಾರಿಗಳು, ಹಣ್ಣುಗಳು, ಗಡ್ಡೆ ಗೆಣಸುಗಳು, ಸೊಪ್ಪು ತರಕಾರಿಗಳು ಮೊದಲಾದ ಹಲವಾರು ವಸ್ತುಗಳನ್ನು ನಾವು ಆಹಾರವಾಗಿ ಉಪಯೋಗಿಸುತ್ತೇವೆ. ನಿಮ್ಮ ಆಹಾರದಲ್ಲಿ ಇವುಗಳನ್ನು ಸೇರಿಸುವುದಿಲ್ಲವೇ?






- ನಮ್ಮ ನಾಲಗೆಗೆ ರುಚಿ ಕೊಡಲು ಅದೆಷ್ಟು ವಸ್ತುಗಳಿವೆ! ಅವುಗಳನ್ನೊಮ್ಮೆ ಪಟ್ಟಿ ಮಾಡೋಣ.

| ತರಕಾರಿಗಳು | ಹಣ್ಣುಗಳು | ದ್ವಿದಳ ಧಾನ್ಯಗಳು | ಗಡ್ಡೆಗೆಣಸುಗಳು | ಸೊಪ್ಪುತರಕಾರಿಗಳು |
|---|---|---|---|---|
| • ಚೀನಿಕಾಯಿ | • ಸೇಬು | • ಪಚ್ಚೆಹೆಸರು | • ಕೆಸು | • ಹರಿವೆ |
| • ಹಾಗಲಕಾಯಿ | • ದ್ರಾಕ್ಷೆ | • ಕಡಲೆ | • ಮರಗೆಣಸು | • ಬಸಳೆ |
| • | • | • | • | |
| • | • | • | • | |

? ಇವುಗಳಲ್ಲದೆ ನಾವು ಆಹಾರವಾಗಿ ಉಪಯೋಗಿಸುವ ಬೇರೆ ವಸ್ತುಗಳಿವೆಯೇ?


ಸಸ್ಯಗಳಿಂದ ಲಭಿಸುವ ಆಹಾರವಸ್ತುಗಳ ಕುರಿತು ನಾವು ಇಲ್ಲಿಯವರೆಗೆ ಹೇಳಿದೆವು. ನಾವು ಆಹಾರಕ್ಕಾಗಿ ಸಸ್ಯಗಳನ್ನು ಮಾತ್ರವಲ್ಲದೆ, ಪ್ರಾಣಿಗಳನ್ನೂ ಅವಲಂಬಿಸುತ್ತೇವೆ.



ಪ್ರಾಣಿಗಳಿಂದ ದೊರೆಯುವ ಆಹಾರ ವಸ್ತುಗಳು ಯಾವುವು? ನಮ್ಮ ಆಹಾರಗಳ ಗುಂಪಿನಲ್ಲಿ ಹಾಲು, ಮೊಟ್ಟೆ, ಮೀನು, ಮಾಂಸ ಮೊದಲಾದವುಗಳು ಸೇರುತ್ತವೆ.

ಸಸ್ಯ ಮತ್ತು ಪ್ರಾಣಿಗಳು ನಮಗಾಗಿ ಎಷ್ಟೊಂದು ಆಹಾರ ವಸ್ತುಗಳನ್ನು ನೀಡುತ್ತವೆ!





**ಒಂದು 'ಹಣ್ಣಿನ' ಒಗಟು**

ಮೈಯೆಲ್ಲಾ ಮುಳ್ಳು, ಆಕಾರದಲ್ಲಿ ಡೊಳ್ಳು. ಅಂತರಂಗದಲಿ ಅಂಟು ಆಹಾರದ ಗಂಟು. ಮಾಗಿದಾಗ ಪರಿಮಳ, ಒತ್ತಿದಾಗ ಹಪ್ಪಳ.

**ಹಲಸಿನ ವಿಶೇಷತೆ**

ಹಲಸು ನಮ್ಮ ಹಿತ್ತಿಲಿನಲ್ಲಿ ಬೆಳೆಯುವ ಒಂದು ಸ್ವಾದಿಷ್ಟವಾದ ಹಣ್ಣು. ಬರಿಕ್ಕೆ ಹಲಸಿನ ರುಚಿಯೇ ಬೇರೆ. ಅತಿದೊಡ್ಡ ಹಣ್ಣೆಂಬ ಹೆಗ್ಗಳಿಕೆಯೂ ಹಲಸಿಗಿದೆ. ಹಲಸಿನ ಬೀಜವನ್ನೂ ನಾವು ಆಹಾರಕ್ಕಾಗಿ ಬಳಸುತ್ತೇವೆ. ಹಲಸಿನಿಂದ ಹಲವು ಆಹಾರ ಪದಾರ್ಥಗಳನ್ನು ತಯಾರಿಸಬಹುದು. ಹಲಸಿನ ಪಲ್ಯ, ಹಲಸಿನ ಪಾಯಸ, ಹಲಸಿನ ಚಿಪ್ಸ್, ಹಲಸಿನ ಹಪ್ಪಳ, ಹಲಸಿನ ಹಣ್ಣಿನ ಅಪ್ಪದಿಂದ ತೊಡಗಿ ಹಲಸಿನ ಹಲ್ವದ ವರೆಗೆ ಇಂದು ತಯಾರಿಸುತ್ತಾರೆ. ಹಲಸು ಒಬ್ಬ ಶ್ರೇಷ್ಠನೇ ಸರಿ! ಹಲವು ಪೋಷಕಾಂಶಗಳಿರುವ ಹಲಸನ್ನು ಅವಗಣಿಸದಿರಿ ಗೆಳೆಯರೇ.



ಆಹಾರದಲ್ಲಿ ಹಲವು ವಿಧದ ವಸ್ತುಗಳನ್ನು ಸೇರಿಸಬೇಕೆಂದು ಹೇಳುವುದು ಯಾಕೆ? ಕೆಳಗೆ ಕೊಟ್ಟಿರುವ ಚಿತ್ರವನ್ನು ಗಮನಿಸಿರಿ.



ವಾರ್ತಾಪತ್ರಿಕೆಗಳ ಕೆಲವು ಶೀರ್ಷಿಕೆಗಳನ್ನು ನೋಡಿದಿರಲ್ಲವೇ? ಆಹಾರದಲ್ಲಿರುವ ಪೋಷಕಾಂಶಗಳ ಕೊರತೆಯು ಹಲವು ರೋಗಗಳಿಗೆ ಕಾರಣವಾಗುವುದು. ಮಕ್ಕಳತಜ್ಞರು ಏನು ಹೇಳುತ್ತಾರೆ ಎಂಬುದನ್ನು ನೋಡೋಣ.

ಮಕ್ಕಳೇ,

ನಿಮಗೆ ಓಡಲು, ನೆಗೆಯಲು ಹಾಗೂ ಆಟವಾಡಲು ಅಗತ್ಯವಾದ ಚೈತನ್ಯವು ಎಲ್ಲಿಂದ ಲಭಿಸುವುದೆಂದು ತಿಳಿದಿದೆಯೇ? ನೀವು ಸೇವಿಸುವ ಆಹಾರದಿಂದ ಸಿಗುವುದು. ಶರೀರದ ಶಕ್ತಿಗೆ, ಬೆಳವಣಿಗೆಗೆ ಮತ್ತು ರೋಗ ಬಾರದಂತೆ ತಡೆಯಲು ಆಹಾರ ಅತಿ ಅಗತ್ಯ. ನಮ್ಮ ಶರೀರಕ್ಕೆ ಅಗತ್ಯವಾದ ವಿವಿಧ ಪೋಷಕಾಂಶಗಳು ಆಹಾರವಸ್ತುಗಳಲ್ಲಿ ಅಡಕವಾಗಿರುತ್ತವೆ. ಆದರೆ ಎಲ್ಲಾ ಆಹಾರವಸ್ತುಗಳಲ್ಲಿಯೂ ಈ ಪೋಷಕಾಂಶಗಳ ಪ್ರಮಾಣ ಸಮಾನವಾಗಿರುವುದಿಲ್ಲ. ಆದುದರಿಂದ ಆಹಾರವು ವೈವಿಧ್ಯಮಯ ಪದಾರ್ಥಗಳನ್ನು ಒಳಗೊಂಡಿರಬೇಕು. ಹಾಲು, ಮೊಟ್ಟೆ, ತರಕಾರಿ, ಹಣ್ಣುಗಳಲ್ಲಿ ಅನೇಕ ಪೋಷಕಾಂಶಗಳು ಅಡಕವಾಗಿವೆ. ಸಸ್ಯಾಹಾರಿಗಳು ಹೆಚ್ಚಿನ ಪ್ರಮಾಣದಲ್ಲಿ ತರಕಾರಿಗಳನ್ನು ಮತ್ತು ದ್ವಿದಳ ಧಾನ್ಯಗಳನ್ನು ಸೇವಿಸಬೇಕು. ಸೊಪ್ಪುತರಕಾರಿಗಳಲ್ಲಿ ಧಾರಾಳ ಪೋಷಕಾಂಶಗಳಿವೆ. ಆದುದರಿಂದ ಆಹಾರದಲ್ಲಿ ಸೊಪ್ಪುತರಕಾರಿಗಳನ್ನು ಸೇರಿಸಲು ಮರೆಯದಿರಿ. ನಮ್ಮ ಆರೋಗ್ಯವನ್ನು ನಾವೇ ಸಂರಕ್ಷಿಸಬೇಕು.



ನಿಮ್ಮ ಶಾಲೆಯ ಮಧ್ಯಾಹ್ನದೂಟದಲ್ಲಿ ತರಕಾರಿಗಳು, ಹಾಲು, ಮೊಟ್ಟೆ ಇತ್ಯಾದಿಗಳನ್ನು ಸೇರಿಸಿದ ಪ್ರಾಧಾನ್ಯವೇನೆಂದು ನಿಮಗೆ ತಿಳಿಯಿತಲ್ಲವೇ?

ಎಲ್ಲಾ ಆಹಾರವಸ್ತುಗಳನ್ನೂ ನಾವು ಬೇಯಿಸಿ ತಿನ್ನುತ್ತೇವೆಯೇ?

ಬೇಯಿಸದೆ ತಿನ್ನುವ ಆಹಾರವಸ್ತುಗಳು ಯಾವುವು?

ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ


| ಬೇಯಿಸದೆ ತಿನ್ನಲು ಸಾಧ್ಯವಿರುವವುಗಳು | ಬೇಯಿಸಿ ಮಾತ್ರ ತಿನ್ನಲು ಸಾಧ್ಯವಿರುವವುಗಳು | ಬೇಯಿಸಿಯೂ ಬೇಯಿಸದೆಯೂ ತಿನ್ನಲು ಸಾಧ್ಯವಿರುವವುಗಳು |
|---|---|---|
| • ಪೇರಳೆ | • ಮಾಂಸ | • ಕ್ಯಾರೆಟ್ |
| • ಮುಳ್ಳುಸೌತೆ | • ಮೀನು | • ಪಪ್ಪಾಯಿ |
| • ಟೊಮೆಟೊ | • ಸುವರ್ಣಗಡ್ಡೆ | • ಹಲಸು |
| • | • | • |
| • | • | • |

ಆಹಾರ ವಸ್ತುಗಳನ್ನು ಬೇಯಿಸಿ ತಿನ್ನುವಾಗ ಅದರಲ್ಲಿರುವ ಪೋಷಕಾಂಶಗಳು ಕಡಿಮೆಯಾಗುತ್ತವೆ. ಆದರೆ ಎಲ್ಲಾ ವಸ್ತುಗಳನ್ನು ನಮಗೆ ಬೇಯಿಸದೆ ತಿನ್ನಲು ಸಾಧ್ಯವಿಲ್ಲ. ಹಣ್ಣುಗಳನ್ನು ಬೇಯಿಸುವ ಅಗತ್ಯವೇ ಇಲ್ಲ. ಬೇಯಿಸದೆ ತಿನ್ನಲು ಸಾಧ್ಯವಿರುವ ಅನೇಕ ತರಕಾರಿಗಳಿವೆ. ತರಕಾರಿಗಳನ್ನು ಬೇಯಿಸದೆ ಉಪಯೋಗಿಸಲು ಸಾಧ್ಯವಾಗುವ ಯಾವುದಾದರೂ ಆಹಾರಪದಾರ್ಥವನ್ನು ನಿಮ್ಮ ಮನೆಯಲ್ಲಿ ತಯಾರಿಸುವಿರಾ? ತರಕಾರಿ ಸಲಾಡ್ – ಅಂತಹ ಒಂದು ಆಹಾರ ಪದಾರ್ಥವಾಗಿದೆ. ಕೆಲವು ಗೆಳೆಯರಿಗಾದರೂ ಇದರ ಪರಿಚಯವಿರಬಹುದು. ಪೋಷಕಾಂಶಗಳು ನಷ್ಟವಾಗದಂತೆ ತರಕಾರಿಗಳನ್ನು ಬಳಸಿ ಸಲಾಡ್ ತಯಾರಿಸುವುದು ಹೇಗೆ?

**ಜಾಗ್ರತೆವಹಿಸಿದರೆ ದುಃಖಿಸುವುದು ಬೇಡ...**



*ಆಹಾರದ ಗುಣಮಟ್ಟ ಮುಖ್ಯವಾಗಿದೆ. ಕೃತಕ ಪರಿಮಳ, ರುಚಿ, ಬಣ್ಣಗಳನ್ನು ಸೇರಿಸಿದ ಆಹಾರವು ಆರೋಗ್ಯಕ್ಕೆ ಹಾನಿಯುಂಟು ಮಾಡುವುದು. ನೀವು ಈ ರೀತಿಯ ಆಹಾರವನ್ನು ಸೇವಿಸುತ್ತೀರಾ? ಉತ್ತಮ ಗುಣಮಟ್ಟವಿಲ್ಲದ ಪಾನೀಯ, ಮಿಠಾಯಿ, ಉಪ್ಪಿನಕಾಯಿ, ಐಸ್‌ಕ್ರೀಂ ಇತ್ಯಾದಿಗಳನ್ನು ಸುಂದರವಾದ ಪ್ಯಾಕೆಟ್‌ಗಳಲ್ಲಿರಿಸಿ ಅಂಗಡಿಗಳಲ್ಲಿ ಮಾರುತ್ತಾರೆ. ಇವುಗಳನ್ನು ಖರೀದಿಸಿ ಸೇವಿಸುವುದು ಬಹಳ ಹಾನಿಕರವಾಗಿದೆ. ಆಹಾರ ವಸ್ತುಗಳನ್ನು ಆಯ್ಕೆ ಮಾಡುವಾಗ ಬಹಳಷ್ಟು ಗಮನಿಸಬೇಕು. ಸುಮ್ಮನೆ ರೋಗಗಳನ್ನು ಆಹ್ವಾನಿಸುವುದು ಯಾಕೆ!*



## ತರಕಾರಿ ಸಲಾಡ್



ಅಗತ್ಯವಿರುವ ಸಾಮಗ್ರಿಗಳು : ನೀರುಳ್ಳಿ, ಮುಳ್ಳುಸೌತೆ, ಟೊಮೆಟೊ, ಹಸಿಮೆಣಸು, ಕ್ಯಾರೆಟ್, ಮೊಸರು, ಉಪ್ಪು.

ತಯಾರಿಸುವ ವಿಧಾನ: ತರಕಾರಿಗಳನ್ನು ಚೆನ್ನಾಗಿ ತೊಳೆಯಿರಿ. ಸಣ್ಣ ತುಂಡುಗಳಾಗಿ ಮಾಡಿರಿ. ಸ್ವಲ್ಪ ಮೊಸರು ಸೇರಿಸಿ ಒಂದು ಚಮಚದ ಸಹಾಯದಿಂದ ಕಲಸಿರಿ. ಅಗತ್ಯವಿರುವಷ್ಟು ಉಪ್ಪು ಸೇರಿಸಿರಿ. ರುಚಿಯಾದ ಸಲಾಡ್ ತಯಾರು.

ನಾಳೆಯ ಮಧ್ಯಾಹ್ನದೂಟಕ್ಕೆ ಒಂದು ಸಲಾಡ್ ಕೂಡಾ ಇದ್ದರೆ? ಅಗತ್ಯವಿರುವ ಸಾಮಗ್ರಿಗಳನ್ನು ಸಂಗ್ರಹಿಸಿ ತನ್ನಿರಿ. ಸಲಾಡ್ ತಯಾರಿಸಿ ಗೆಳೆಯರೊಂದಿಗೆ ತಿಂದು ಆಸ್ವಾದಿಸಿರಿ.

## ಹಣ್ಣು ಮತ್ತು ತರಕಾರಿಗಳನ್ನು ಉಪಯೋಗಿಸುವಾಗ

- ಹಣ್ಣು ಮತ್ತು ತರಕಾರಿಗಳನ್ನು ಚೆನ್ನಾಗಿ ತೊಳೆದ ಬಳಿಕ ಉಪಯೋಗಿಸಬೇಕು.
- ತರಕಾರಿಗಳನ್ನು ತೊಳೆದ ಬಳಿಕ ತುಂಡರಿಸಬೇಕು. ತುಂಡು ಮಾಡಿದ ಬಳಿಕ ತೊಳೆಯಬಾರದು.
- ತರಕಾರಿಗಳನ್ನು ಅಗತ್ಯದಷ್ಟು ಮಾತ್ರ ಬೇಯಿಸಬೇಕು.

## ಐವರು ಗೆಳೆಯರು





ಮಾವಿನಕಾಯಿಯ ರುಚಿ ಯಾವುದು?

ಮಾವಿನ ಹಣ್ಣಿನ ರುಚಿಯೋ?

ಮಾವಿನ ಕಾಯಿಯ ಹುಳಿಯನ್ನು, ಮಾವಿನ ಹಣ್ಣಿನ ಸಿಹಿಯನ್ನು ಹೇಗೆ ತಿಳಿದುಕೊಂಡಿರಿ?

ನಾಲಗೆಯಿಂದ ರುಚಿ ನೋಡಿಯಲ್ಲವೇ?

ರುಚಿಯನ್ನು ತಿಳಿಯಲು ನಾಲಗೆಯು ನಮಗೆ ಸಹಾಯಕವಾಗಿದೆ. ಮಾವಿನಹಣ್ಣಿನ ಪರಿಮಳವನ್ನು ತಿಳಿಯಲು ಮೂಗಿನ ಸಹಾಯವೂ ಬೇಕು.

ಇಂತಹ ಅನುಭವಗಳನ್ನು ತಿಳಿಯಲು ನಮಗೆ ಸಹಾಯಕವಾದ ಕೆಲವು ಅಂಗಗಳಿವೆ.

ಕಣ್ಣು, ಮೂಗು, ನಾಲಿಗೆ, ಚರ್ಮ, ಕಿವಿ, ಎಂಬ ಐದು ಅವಯವಗಳ ಮೂಲಕ ನಾವು ಈ ಅನುಭವಗಳನ್ನು ತಿಳಿಯುತ್ತೇವೆ. ಇವುಗಳನ್ನು ಪಂಚೇಂದ್ರಿಯಗಳೆನ್ನುವರು. ನೋಡಿ, ಕೇಳಿ, ಮೂಸಿನೋಡಿ, ರುಚಿನೋಡಿ ಮತ್ತು ಮುಟ್ಟಿ ನೋಡಿ ಅನೇಕ ವಿಚಾರಗಳನ್ನು ಅರಿಯುತ್ತೇವೆ. ಪಂಚೇಂದ್ರಿಯಗಳ ಮೂಲಕ ನಮ್ಮ ಕಲಿಕೆಯು ನಡೆಯುತ್ತದೆ.


ನೋಡಿತಿಳಿಯಲು


ಕೇಳಿತಿಳಿಯಲು


ಮೂಸಿತಿಳಿಯಲು


ರುಚಿ ನೋಡಲು



ಮುಟ್ಟಿ ತಿಳಿಯಲು

ಕೆಳಗೆ ಕೊಟ್ಟಿರುವ ವಿಚಾರಗಳನ್ನು ನೀವು ಹೇಗೆ ತಿಳಿಯುವಿರಿ? ಸರಿಹೊಂದುವವುಗಳ ಎದುರು √ ಗುರುತನ್ನು ಹಾಕಿರಿ.

| ಸಂದರ್ಭಗಳು | ಕಣ್ಣು | ಮೂಗು | ನಾಲಿಗೆ | ಚರ್ಮ | ಕಿವಿ |
|---|---|---|---|---|---|
| • ಕಾಮನಬಿಲ್ಲಿನ ಬಣ್ಣ | | | | | |
| • ಹಕ್ಕಿಗಳ ಚಿಲಿಪಿಲಿ | | | | | |
| • ಚಹಾದ ಬಿಸಿ | | | | | |
| • ಗರಿಗಳ ನಯ | | | | | |
| • ಮೆಣಸಿನ ಖಾರ | | | | | |
| • ಗುಡುಗಿನ ಶಬ್ಧ | | | | | |
| • ಜೇನಿನ ಸಿಹಿ | | | | | |
| • ಆಕಾಶದಲ್ಲಿರುವ ನಕ್ಷತ್ರಗಳು | | | | | |
| • ಅಗರಬತ್ತಿಯ ಸುವಾಸನೆ | | | | | |
| • ಮಂಜುಗಡ್ಡೆಯ ತಂಪು | | | | | |

## ಒಟ್ಟಿಗೆ ಕುಳಿತು ಆಹಾರ ಸೇವಿಸುವ

ಮಧ್ಯಾಹ್ನವಾಯಿತು. ರಾಮುವಿಗೆ ಹಸಿವಾಗತೊಡಗಿತು. ಅವನು ಗಂಟೆಯಾಗುವುದನ್ನೇ ಕಾಯುತ್ತಾ ಕುಳಿತನು. ಠಣ.... ಠಣ.... ಠಣ... ಅವನು ಥಟ್ಟನೆದ್ದನು. ರಾಮು ಹಾಗೂ ಸಂಗಡಿಗರು ಭೋಜನ ಶಾಲೆಯತ್ತ ನಡೆದರು. "ರಾಮು ನೀನು ಕೈ ತೊಳೆಯಲಿಲ್ಲ ಅಲ್ಲವೇ?" ಮಣಿಕುಟ್ಟಿ ಕೇಳಿದಾಗ ರಾಮುವಿಗೆ ಆ ವಿಚಾರ ನೆನಪಾಯಿತು. ನಳ್ಳಿಯನ್ನು ತಿರುಗಿಸಿ ಕೈ ಹಾಗೂ ಬಟ್ಟಲನ್ನು ತೊಳೆದು ಅವನು ಊಟಕ್ಕೆ ಕುಳಿತನು. ರಾಮುವಿನಂತೆ ನೀವೂ ಕೈ ಹಾಗೂ ಬಟ್ಟಲನ್ನು ತೊಳೆಯಲು ಮರೆಯುತ್ತೀರಾ? ಊಟದ ಮೊದಲು ಕೈ ತೊಳೆಯದಿದ್ದರೆ ತೊಂದರೆಯೇನು?



ಕೆಳಗೆ ಹೇಳಿದ ಒಂದು ಸರಳ ಪ್ರಯೋಗವನ್ನು ಮಾಡಿ ನೋಡಿರಿ.

## ಶುಚಿತ್ವದೆಡೆಗೆ....



ಒಂದು ಬಾಲ್ದಿಯಲ್ಲಿ ಮುಕ್ಕಾಲು ಭಾಗದಷ್ಟು ಶುದ್ಧನೀರನ್ನು ತೆಗೆದುಕೊಳ್ಳಿರಿ.

ಅದರಿಂದ ಒಂದು ಗ್ಲಾಸು ನೀರು ತೆಗೆದು ಮೇಜಿನ ಮೇಲಿಡಿರಿ.

ಮಧ್ಯಾಹ್ನ ಊಟಕ್ಕೆ ಹೋಗುವ ಮೊದಲು ಕ್ಲಾಸಿನ ಪ್ರತಿಯೊಬ್ಬರೂ ಬಾಲ್ದಿಯಲ್ಲಿರುವ ನೀರಿನಲ್ಲಿ ಚೆನ್ನಾಗಿ ಕೈ ತೊಳೆಯಿರಿ.

ಎಲ್ಲರೂ ಕೈ ತೊಳೆದ ಬಳಿಕ ಇನ್ನೊಂದು ಗ್ಲಾಸಿನಲ್ಲಿ ಬಾಲ್ದಿಯಿಂದ ನೀರನ್ನು ತೆಗೆದು ಮೇಜಿನ ಮೇಲಿಡಿರಿ.

ಇನ್ನು ಎರಡೂ ಗ್ಲಾಸುಗಳನ್ನು ನಿರೀಕ್ಷಣೆ ಮಾಡಿರಿ.

ನೀವು ಏನನ್ನು ಕಂಡುಕೊಂಡಿರಿ?

ಎರಡನೇ ಗ್ಲಾಸಿನಲ್ಲಿರುವ ನೀರಿನ ಬಣ್ಣ ಬದಲಾಗಲು ಕಾರಣವೇನು? ನಮಗೆ ಕಾಣಿಸದ ಅದೆಷ್ಟು ಮಾಲಿನ್ಯಗಳು! ಕೈ ತೊಳೆಯದಿದ್ದರೆ ಉಂಟಾಗುವ ದುಷ್ಪರಿಣಾಮಗಳೇನೆಂದು ತಿಳಿಯಿತಲ್ಲವೇ? ಇನ್ನು ಮುಂದೆ ಕೈ ತೊಳೆಯಲು ಮರೆಯುವುದಿಲ್ಲ ತಾನೇ?

ಈ ಪ್ರಯೋಗದ ಟಿಪ್ಪಣಿಯನ್ನು ಪರಿಸರ ಪುಸ್ತಕದಲ್ಲಿ ಬರೆಯಲು ಮರೆಯದಿರಿ.

## ಮಧ್ಯಾಹ್ನದ ಊಟ

ನಿಮಗೆ ಶಾಲೆಯಲ್ಲಿ ಮಧ್ಯಾಹ್ನದ ಊಟ ಸಿಗುವುದಲ್ಲವೇ?

ಊಟವಲ್ಲದೆ ಶಾಲೆಯಿಂದ ದೊರೆಯುವ ಇತರ ಆಹಾರವಸ್ತುಗಳು ಯಾವುವು?

ನಿಮ್ಮ ಶಾಲೆಯಲ್ಲಿ ಮಧ್ಯಾಹ್ನದ ಊಟಕ್ಕಿರುವ ಆಹಾರ ಪದಾರ್ಥಗಳ ಪಟ್ಟಿಯನ್ನು ಪ್ರದರ್ಶಿಸಿರುವರೇ?

ನಿಮ್ಮ ಶಾಲೆಯಲ್ಲಿ ನಿಮಗೆ ದೊರಕುವ ಆಹಾರಪದಾರ್ಥಗಳ ಪಟ್ಟಿ ತಯಾರಿಸಿರಿ.

| ವಾರ | ಆಹಾರಪದಾರ್ಥಗಳು |
|---|---|
| ಸೋಮ | |
| ಮಂಗಳ | |
| ಬುಧ | |
| ಗುರು | |
| ಶುಕ್ರ | |

**ಹಸಿವಿನಿಂದ ಬಳಲುವ ಸಾವಿರಾರು ಮಂದಿಯ ಕುರಿತು ನೀವು ಯೋಚಿಸಿರುವಿರಾ?**



*ಆಹಾರ ಪೋಲು ಮಾಡದಿರಿ.*



"ರಾಮು, ಬೇಗ ಬಾ ನಾವು ಒಟ್ಟಿಗೆ ಕುಳಿತುಕೊಳ್ಳುವ" – ನಾಸಿರ್ ಕೂಗಿ ಹೇಳಿದ. ರಾಮು ಹಾಗೂ ಗೆಳೆಯರು ತರಗತಿಯತ್ತ ನಡೆದರು. ಥೋಮಸ್, ಖದೀಜ, ಮುರಳಿ, ರಾಣಿ ಎಲ್ಲರೂ ಅಲ್ಲಿದ್ದರು. ಅವರು ಒಟ್ಟಿಗೆ ಕುಳಿತು ಊಟ ಮಾಡಿದರು. ಖದೀಜಳ ತಾಯಿ ಕೊಟ್ಟು ಕಳುಹಿಸಿದ ತೆಂಗಿನಕಾಯಿ ಚಟ್ನಿ ಎಲ್ಲರಿಗೂ ಇಷ್ಟವಾಯಿತು. "ಮುರಳಿ, ಅನ್ನ ಬಿಸಾಡಬೇಡ" – ರಾಣಿ ನೆನಪಿಸಿದಳು.




ನಿಮ್ಮ ಮನೆಯಲ್ಲಿ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವಿರಾ? ನೀವು ಗೆಳೆಯರೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುವುದಿಲ್ಲವೇ?

ಒಬ್ಬನೇ ಕುಳಿತು ಊಟಮಾಡುವುದು ನಿಮಗಿಷ್ಟವೇ? ಅಥವಾ ಒಟ್ಟಿಗೆ ಕುಳಿತು ಊಟ ಮಾಡುವುದೇ?

ತುಂಬಾ ಜನರೊಂದಿಗೆ ಕುಳಿತು ಊಟಮಾಡುವ ಇತರ ಸಂದರ್ಭಗಳು ಯಾವುವು?

- ವಿವಾಹ
- 
- 



## ಮಧ್ಯಾಹ್ನದ ಊಟ ಪ್ರತಿಯೊಂದು ಮಗುವಿನ ಹಕ್ಕು

ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ಅನೇಕ ಮಕ್ಕಳು ನಮ್ಮ ದೇಶದಲ್ಲಿದ್ದಾರೆ. ಇವರಲ್ಲಿ ಶಾಲೆಗೆ ಹೋಗದ ಮಕ್ಕಳೂ ಇದ್ದಾರೆಂಬುದನ್ನು ನಾವು ತಿಳಿಯಬೇಕು. ಆಹಾರ ಸೇವಿಸದೆ ಶಾಲೆಗೆ ಬರುವ ಮಕ್ಕಳಿಗೆ ಸರಿಯಾಗಿ ಕಲಿಯಲು ಖಂಡಿತವಾಗಿಯೂ ಸಾಧ್ಯವಿಲ್ಲ.

ಕೆಲವು ವರ್ಷಗಳ ಹಿಂದೆ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಒಂದು ಮಹತ್ವದ ತೀರ್ಪನ್ನು ನೀಡಿತು. ಅದೇನೆಂದರೆ ಪ್ರಾಥಮಿಕ ಶಾಲೆಗಳ ಎಲ್ಲಾ ಮಕ್ಕಳಿಗೂ ತಯಾರಿಸಿದ ಆಹಾರವನ್ನು ಬಿಸಿಯಾಗಿ ವಿತರಿಸಬೇಕು. ಮಧ್ಯಾಹ್ನದೂಟ ಎಂಬುದು ಪ್ರತಿಯೊಂದು ಮಗುವಿನ ಹಕ್ಕು. ಇದನ್ನು ಖಾತರಿಪಡಿಸಲಿರುವ ಕ್ರಮಗಳನ್ನು ಭಾರತ ಸರಕಾರ ಕೈಗೊಂಡಿತು. ನಿಮ್ಮ ಶಾಲೆಯ ಮಧ್ಯಾಹ್ನದ ಊಟವೂ ಈ ಕಾರ್ಯಕ್ರಮದ ಭಾಗವಾಗಿದೆ.

## ದೂರದಿಂದ ತಲುಪುವ ಸ್ನೇಹಿತರು







ನಾವು ಉಪಯೋಗಿಸುವ ತರಕಾರಿಗಳು ಯಾವುವು?

ನಿಮ್ಮ ಮನೆಯಲ್ಲಿ ಬೆಳೆಸುವ ತರಕಾರಿಗಳು ಯಾವುವು?

ನಾವು ನಮ್ಮ ಊರಿನಲ್ಲಿ ಬೆಳೆಯುವ ತರಕಾರಿಗಳನ್ನು ಮಾತ್ರ ಉಪಯೋಗಿಸುತ್ತೇವೆಯೇ?

ನಮ್ಮ ಊರಿನ ಅಂಗಡಿಗಳಿಗೆ ತಲುಪುವ ತರಕಾರಿಗಳು ಎಲ್ಲಿಂದ ಬರುವುದು?

ಸಮೀಪದ ತರಕಾರಿ ಅಂಗಡಿಯನ್ನು ಸಂದರ್ಶಿಸಿರಿ. ಒಂದು ಸಣ್ಣ ಅನ್ವೇಷಣೆ ಮಾಡಿರಿ.

ಏನೆಲ್ಲಾ ವಿಚಾರಗಳನ್ನು ಕಂಡುಕೊಂಡಿರಿ?

ನಾವು ಉಪಯೋಗಿಸುವ ತರಕಾರಿಗಳಲ್ಲಿ ಹೆಚ್ಚಿನವುಗಳೂ ಇತರ ರಾಜ್ಯಗಳಿಂದ ಬರುವವುಗಳಾಗಿವೆಯಲ್ಲವೇ? ತರಕಾರಿಗಳು ಮಾತ್ರವಲ್ಲ, ಹಣ್ಣುಗಳು, ಧಾನ್ಯಗಳು ಮುಂತಾದ ಆಹಾರವಸ್ತುಗಳ ಸ್ಥಿತಿಯೂ ಇದುವೆ ಆಗಿದೆ. ಕೃಷಿ ಮಾಡಲು ಯೋಗ್ಯವಾದ ಮಣ್ಣು ನಮ್ಮ ಮನೆಯ ಹಿತ್ತಿಲಲ್ಲೂ ಇಲ್ಲವೇ? ನಮಗೆ ಅಗತ್ಯವಾದವುಗಳನ್ನು ಕೃಷಿಮಾಡಲು ನಾವು ಹಿಂಜರಿಯಬಾರದು.

ನಿಮ್ಮ ಹಿತ್ತಿಲಲ್ಲಿ ಯಾವೆಲ್ಲ ಹಣ್ಣುಗಳನ್ನು , ತರಕಾರಿಗಳನ್ನು ಕೃಷಿ ಮಾಡುತ್ತೀರಿ?

ನಮ್ಮ ಮನೆ ಹಿತ್ತಿಲಲ್ಲಿ ಬೆಳೆಯುವ ಹಲಸು, ಮಾವು, ಪಪ್ಪಾಯಿ, ನುಗ್ಗೆ, ಹರಿವೆ, ತಗತೆ, ಬಾಳೆ ಇವುಗಳೆಲ್ಲಾ ಉತ್ತಮ ಗುಣಮಟ್ಟದ ಆಹಾರವಸ್ತುಗಳಾಗಿವೆ. ಇವುಗಳನ್ನು ನಾವು ಹಣಕೊಟ್ಟು ಖರೀದಿಸುವುದು ಯಾಕೆ?

ಸ್ವಂತ ಹಿತ್ತಿಲಲ್ಲಿ ನೆಟ್ಟು ಬೆಳೆಸುವ ತರಕಾರಿ ಹಾಗೂ ಹಣ್ಣುಗಳಿಗೆ ಯಾವೆಲ್ಲಾ ಹಿರಿಮೆಗಳಿವೆ?

- ತಾಜಾತನ ನಷ್ಟವಾಗದೆ ಉಪಯೋಗಿಸಬಹುದು.
- ರಾಸಾಯನಿಕ ಗೊಬ್ಬರಗಳನ್ನು ಮಿತಿಮೀರಿ ಉಪಯೋಗಿಸುವುದಿಲ್ಲ.
- ರಾಸಾಯನಿಕ ಕೀಟನಾಶಕಗಳನ್ನು ಉಪಯೋಗಿಸುವುದಿಲ್ಲ.
- ಉತ್ತಮ ಗುಣಮಟ್ಟದ್ದು ಹಾಗೂ ರುಚಿಯುಳ್ಳದ್ದು ಸಿಗುವುದು.
- 

ಇಂತಹ ಹಿರಿಮೆಗಳಿರುವ ತರಕಾರಿಗಳು, ಹಣ್ಣುಗಳಲ್ಲವೇ ನಮಗೆ ಬೇಕಾದುದು? ಹಾಗಾದರೆ ಮನೆ ಮತ್ತು ಶಾಲೆಗಳಲ್ಲಿ ತರಕಾರಿ ತೋಟ ಅಗತ್ಯವಲ್ಲವೇ?

ನಿಮ್ಮ ಮನೆಯಲ್ಲಿ ತರಕಾರಿ ತೋಟವಿದೆಯೇ? ಶಾಲೆಯಲ್ಲಿ?

ಇನ್ನೂ ನಾವು ಹಿಂಜರಿದರೆ ನಮ್ಮ ಆರೋಗ್ಯಕ್ಕೇ ನಷ್ಟ. ಮನೆ ಮತ್ತು ಶಾಲೆಯಲ್ಲಿ ತರಕಾರಿ ತೋಟ ಬೇಕು. ಇದು ನಮ್ಮ ಗುರಿಯಾಗಿರಲಿ. ಸ್ನೇಹಿತರೇ, ನೀವು ತಯಾರಿದ್ದೀರಲ್ಲವೇ? ಮಧ್ಯಾಹ್ನದೂಟಕ್ಕೆ ಒಂದು ಹಿಡಿ ತರಕಾರಿಯಾದರೂ ನಿಮ್ಮ ತೋಟದಿಂದಿರಲಿ.

## ಶಾಲೆ ಮತ್ತು ಮನೆಗಳಲ್ಲಿ ತರಕಾರಿ ತೋಟ

ಉತ್ತಮ ತರಕಾರಿ ತೋಟಕ್ಕಾಗಿ ನಾವು ಪ್ರಯತ್ನಿಸೋಣ. ಇದಕ್ಕಾಗಿ ಗಮನಿಸಬೇಕಾದ ವಿಚಾರಗಳು ಯಾವುವು?

- ಸ್ಥಳವನ್ನು ಕಂಡುಕೊಳ್ಳುವುದು.
- ಬೀಜಗಳನ್ನು ಸಂಗ್ರಹಿಸುವುದು.
- ಅಗತ್ಯವಿರುವ ಉಪಕರಣಗಳನ್ನು ಸಂಗ್ರಹಿಸುವುದು.
- ನೀರಿನ ಸೌಕರ್ಯವನ್ನು ಒದಗಿಸುವುದು.
- ಪ್ರತಿಯೊಬ್ಬರಿಗೂ ಜವಾಬ್ದಾರಿಗಳನ್ನು ನೀಡುವುದು.

ರಮ್ಯಳ ತರಕಾರಿತೋಟದ ಚಿತ್ರವನ್ನು ನೋಡಿದಿರಾ? ಯೋಗ್ಯವಾದ ಬಣ್ಣಕೊಟ್ಟು ಅಂದಗೊಳಿಸಿರಿ



## ಕೃಷಿಮಾಡದಿದ್ದರೆ ....

ಕೃಷಿಭೂಮಿಯನ್ನು  ಇತರ ಅಗತ್ಯಗಳಿಗೆ ಉಪಯೋಗಿಸುವುದು ಸರಿಯೇ? ಗದ್ದೆಗಳಿಗೆಲ್ಲಾ ಮಣ್ಣು ತುಂಬಿಸಿದರೆ ಭತ್ತದ ಕೃಷಿ ಮಾಡುವುದೆಲ್ಲಿ? ಕೆರೆಗಳನ್ನು ಮುಚ್ಚಿದರೆ ಅಗತ್ಯಕ್ಕಿರುವ ನೀರು ಲಭಿಸೀತೆ? ಯಾರೂ ಕೃಷಿ ಮಾಡದಿದ್ದರೆ ನಾವು ತಿನ್ನುವುದಾದರೂ ಏನನ್ನು? ಕೃಷಿಭೂಮಿಯನ್ನು ರಕ್ಷಿಸಲೇಬೇಕು.



ಕೃಷಿಯಿಲ್ಲದ ಒಂದು ಊರಿನಲ್ಲಿ ನಮಗೆ ಜೀವಿಸಲು ಹೇಗೆ ಸಾಧ್ಯ? ಆರೋಗ್ಯವಂತರಾಗಿ ಬೆಳೆಯಬೇಕಾದರೆ ನಮಗೆ ಬೇಕಾದುದು ಉತ್ತಮ ಆಹಾರವಲ್ಲವೇ? ನಮಗೆ ಅಗತ್ಯವಾದವುಗಳನ್ನು ನಮ್ಮ ಪರಿಸರದಲ್ಲಿ ಬೆಳೆಸಲು ಪ್ರಯತ್ನಿಸುವ. ಉತ್ತಮ ಗುಣಮಟ್ಟದ ಹಾಗೂ ರುಚಿಕರವಾದ ಆಹಾರವಸ್ತುಗಳನ್ನು ಸೇವಿಸಿ ಬಲಶಾಲಿಗಳಾಗಿ ಬೆಳೆಯೋಣ.




## ಕಲಿಕೆಯ ಪ್ರಧಾನ ಸಾಧನೆಗಳು

- ಸರಿಯಾದ ಬೆಳವಣಿಗೆ ಹಾಗೂ ಆರೋಗ್ಯಕ್ಕೆ ಆಹಾರ ಅಗತ್ಯವೆಂಬುದನ್ನು ತಿಳಿದು ಹೇಳಲು ಸಾಧ್ಯವಾಗುವುದು.
- ಅಗತ್ಯವಿರುವ ಪೋಷಕಾಂಶಗಳು ಲಭಿಸಲು ಆಹಾರದಲ್ಲಿ ವೈವಿಧ್ಯಮಯವಾದ ಯಾವೆಲ್ಲ ಆಹಾರವಸ್ತುಗಳನ್ನು ಸೇರಿಸಿಕೊಳ್ಳಬೇಕೆಂದು ಸೂಚಿಸಲು ಸಾಧ್ಯವಾಗುವುದು.
- ಉತ್ತಮ ಆಹಾರಕ್ರಮಗಳನ್ನು ಸೂಚಿಸಲು ಹಾಗೂ ಪಾಲಿಸಲು ಸಾಧ್ಯವಾಗುವುದು.
- ಆಹಾರವನ್ನು ಪೋಲುಮಾಡಬಾರದೆಂಬ ಸಂದೇಶವನ್ನು ಇತರರಿಗೆ ತಲುಪಿಸಲಿರುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಿಲು ಸಾಧ್ಯವಾಗುವುದು.
- ನಮಗೆ ಅಗತ್ಯವಿರುವ ಆಹಾರವಸ್ತುಗಳಲ್ಲಿ ಹೆಚ್ಚಿನವುಗಳೂ ಇತರ ರಾಜ್ಯಗಳಿಂದ ಬರುವವುಗಳೆಂದು ತಿಳಿದು ಹೇಳಲು ಸಾಧ್ಯವಾಗುವುದು.
- ತರಕಾರಿತೋಟದ ಪ್ರಾಧಾನ್ಯವನ್ನು ಸೂಚಿಸಲು ಸಾಧ್ಯವಾಗುವುದು.
- ಪಂಚೇಂದ್ರಿಯಗಳನ್ನು, ಅವುಗಳ ಕಾರ್ಯವನ್ನು ಹೇಳಲು ಸಾಧ್ಯವಾಗುವುದು.

## ಮೌಲ್ಯಮಾಪನ ಮಾಡೋಣ

1. ಹಣ್ಣು ಮತ್ತು ತರಕಾರಿಗಳನ್ನು ತೊಳೆದು ಉಪಯೋಗಿಸಬೇಕೆಂದು ಹೇಳುವುದು ಯಾಕೆ?
   a. ಅವುಗಳು ಆಕರ್ಷಕವಾಗಲು
   b. ಮಾಲಿನ್ಯ ಹಾಗೂ ಕೀಟನಾಶಕಗಳ ಅಂಶವನ್ನು ಹೋಗಲಾಡಿಸಲು
   c. ಅಡುಗೆಯನ್ನು ಸುಲಭಗೊಳಿಸಲು
   d. ಸುಲಭವಾಗಿ ತುಂಡರಿಸಲು
2. ಲಿಂಬೆ, ಸಕ್ಕರೆ, ಶುದ್ಧನೀರು ಎಂಬಿವುಗಳನ್ನು ಉಪಯೋಗಿಸಿ ಯಾವುದಾದರೂ ಪಾನೀಯವನ್ನು ತಯಾರಿಸಬಹುದೇ? ಪಾನೀಯದ ಹೆಸರು ಮತ್ತು ತಯಾರಿಸುವ ವಿಧಾನವನ್ನು ಬರೆಯಿರಿ.
3. ಮೂವರು ಮಕ್ಕಳು ಸೇವಿಸುವ ಆಹಾರವಸ್ತುಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ. ಹೆಚ್ಚು ಪೋಷಕಾಂಶವಿರುವ ಆಹಾರ ಸೇವಿಸುವುದು ಯಾವ ಮಗು? ಯಾಕೆ?

| ಅನೀಶ್ | ಮಿನಿ | ಸಾನಿ |
|---|---|---|
| ಅನ್ನ | ಅನ್ನ | ಅನ್ನ |
| ಐಸ್‌ಕ್ರೀಂ | ಮಿಠಾಯಿ | ತರಕಾರಿ |
| ನೂಡಲ್ಸ್ | ದೋಸೆ | ಹಣ್ಣುಗಳು |
| ಬೇಕರಿ ವಸ್ತುಗಳು | ಪುಟ್ಟು | ಸೊಪ್ಪುತರಕಾರಿಗಳು |
| ಮೀನು | ಹಾಲು | ಮೊಟ್ಟೆ, ಹಾಲು |

## ಮುಂದುವರಿದ ಚಟುವಟಿಕೆಗಳು

1. ಹಲಸಿನ ವಿಶೇಷತೆಗಳನ್ನು ಓದಿದಿರಲ್ಲವೇ? ಇದೇ ರೀತಿ ತೆಂಗಿನ ವಿಶೇಷತೆಯನ್ನು ತಯಾರಿಸಬಹುದೇ?
2. ನಿಮಗೆ ಇಷ್ಟವಾದ ಒಂದು ಆಹಾರ ಪದಾರ್ಥವನ್ನು ತಯಾರಿಸುವ ವಿಧಾನವನ್ನು ಬರೆಯಿರಿ.
3. ನಮ್ಮ ಶಾಲೆಯ ಮಧ್ಯಾಹ್ನದೂಟವನ್ನು ಅತ್ಯುತ್ತಮವಾಗಿಸಲು ಯಾವೆಲ್ಲ ಸಲಹೆಗಳನ್ನು ನಿಮ್ಮಿಂದ ನೀಡಲು ಸಾಧ್ಯ?
4. "ಆಹಾರವನ್ನು ಪೋಲುಮಾಡಬಾರದು" ಎಂಬ ಆಶಯವನ್ನು ಎಲ್ಲರಿಗೂ ತಲುಪಿಸಬೇಕಾಗಿದೆ. ಇದಕ್ಕಾಗಿ ಶಾಲಾಪರಿಸರದಲ್ಲಿ ಹಚ್ಚಲು ಪೋಸ್ಟರ್ ತಯಾರಿಸಿರಿ.
5. ಹಣ್ಣುಗಳ ಹಾಗೂ ತರಕಾರಿಗಳ ಚಿತ್ರ ರಚಿಸಿ ಬಣ್ಣಕೊಡಿರಿ. ಪ್ರತಿಯೊಂದರ ಕುರಿತು ಲಘು ಟಿಪ್ಪಣಿ ಬರೆಯಲು ಮರೆಯದಿರಿ.


# 6 ಹೊನ್ನು ಬೆಳೆಸುವ ಕೈಗಳು




ತೇನಿ ಬೆಟ್ಟದ ಸಿಂಹರಾಜನನ್ನು ಕಂಡರೆ ಕಾಡಿನ ಎಲ್ಲಾ ಪ್ರಾಣಿಗಳಿಗೂ ಬಹಳ ಇಷ್ಟ. ಒಮ್ಮೆ ಪ್ರಾಣಿಗಳೆಲ್ಲಾ ಒಟ್ಟು ಸೇರಿದುವು.

ಸಿಂಹರಾಜನ ಹುಟ್ಟುಹಬ್ಬವನ್ನು ಆಚರಿಸಲು ಪ್ರಾಣಿಗಳೆಲ್ಲಾ ತೀರ್ಮಾನಿಸಿದವು.


ಪ್ರತಿಯೊಬ್ಬರೂ ಒಂದೊಂದು ಜವಾಬ್ದಾರಿ ವಹಿಸಿಕೊಂಡರು. ಆಚರಣೆಯೊಂದಿಗೆ ಭರ್ಜರಿ ಔತಣ ಏರ್ಪಡಿಸಲು ತೀರ್ಮಾನಿಸಲಾಯಿತು. ಪಾಯಸ ತಯಾರಿಸುವ ಜವಾಬ್ದಾರಿ ಕಿಟ್ಟುಮೊಲ ಹಾಗೂ ಮೋಟುಮಂಗನ ಪಾಲಾಯಿತು. ಕಿಟ್ಟು ಹಾಗೂ ಮೋಟು ಪಾಯಸ ತಯಾರಿಸುವ ಪ್ರಯತ್ನ ಆರಂಭಿಸಿದುವು.





ಕಿಟ್ಟು ಹಾಗೂ ಮೋಟು ಪಾಯಸ ಮಾಡಲಿರುವ ಪಾತ್ರೆಗಾಗಿ ಬಾಲು ಕರಡಿಯನ್ನು ಭೇಟಿ ಮಾಡಿದರು. ಅವರಿಗೆ ಬೇಕಾದ ಪಾತ್ರೆಯನ್ನು ಕರಡಿಯಣ್ಣ ನೀಡಿದನು.




ಧಾನ್ಯಗಳಿಗಾಗಿ ಕೃಷಿಕಳಾದ ಮಣಿಗಿಳಿಯ ಬಳಿಗೆ ಹೋದರು. ಅಗತ್ಯವಿರುವ ಧಾನ್ಯವನ್ನು ಮಣಿಗಿಳಿ ನೀಡಿದಳು.




ಸೌದೆಗಾಗಿ ಮರಕಡಿಯುವ ಹುಲಿಯಣ್ಣನನ್ನು ಕಂಡರು. ಅಗತ್ಯವಿರುವ ಸೌದೆಯನ್ನು ಹುಲಿಯಣ್ಣ ನೀಡಿದನು.




ಕಾಡಿನ ಜಾಣ ವ್ಯಾಪಾರಿಯಾದ ಮರಿಬೆಕ್ಕು ಹಾಲು ಮತ್ತು ಸಕ್ಕರೆ ನೀಡಿದಳು. ಕಿಟ್ಟುವಿಗೂ ಮೋಟುವಿಗೂ ಸಂತೋಷ ವಾಯಿತು.


ಕಿಟ್ಟು ಮತ್ತು ಮೋಟು ತಯಾರಿಸಿದ ಹಾಲುಪಾಯಸ ಕಾಡಿನ ಗೆಳೆಯರಿಗೆಲ್ಲಾ ಇಷ್ಟವಾಯಿತು. ಪಾತ್ರೆಗಳನ್ನು ತಯಾರಿಸುವ ಬಾಲುಕರಡಿ, ಕೃಷಿಕಳಾದ ಮಣಿಗಿಳಿ, ಸೌದೆಕಡಿಯುವ ಹುಲಿಯಣ್ಣ, ವ್ಯಾಪಾರಿಯಾದ ಮರಿಬೆಕ್ಕು ಸಹಾಯ ಮಾಡದಿರುತ್ತಿದ್ದರೆ, ಅವರಿಗೆ ಪಾಯಸ ಮಾಡಲು ಸಾಧ್ಯ ವಾಗುತ್ತಿತ್ತೇ? ಸಹಾಯ ಮಾಡಿದ ಎಲ್ಲರಿಗೂ ಕೃತಜ್ಞತೆ ಹೇಳಲು ಕಿಟ್ಟುವೂ ಮೋಟುವೂ ಮರೆಯಲಿಲ್ಲ.

ಸಿಂಹರಾಜನಿಗೆ ಸಂತೋಷವಾಯಿತು. ಕಾಡಿನ ಎಲ್ಲಾ ಜೀವಿಗಳನ್ನು ಸಿಂಹರಾಜನು ಅಭಿನಂದಿಸಿದನು.

ಪಾಯಸ ಮಾಡಲು ಕಿಟ್ಟು ಮೊಲ ಮತ್ತು ಮೋಟು ಮಂಗ ಯಾರ ಸಹಾಯವನ್ನೆಲ್ಲಾ ಪಡೆದರು?
ಹೀಗೆಯೇ ನಿತ್ಯಜೀವನದಲ್ಲಿ ನಮಗೂ ಹಲವು ರೀತಿಯ ಅಗತ್ಯಗಳುಂಟಾಗುವುದಿಲ್ಲವೇ?
ನಾವು ಯಾರ ಸೇವೆಯನ್ನೆಲ್ಲ ಪಡೆಯುತ್ತೇವೆ?
ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕಸುಬುಗಳು | ಕೆಲಸ ಮಾಡುವವ |
|---|---|
| ಬಟ್ಟೆ ಹೊಲಿಯುವುದು | ಟೈಲರ್ |
| ವಾಹನಗಳನ್ನು ಓಡಿಸುವುದು | |
| ರೋಗಿಗಳಿಗೆ ಚಿಕಿತ್ಸೆ ನೀಡುವುದು | |
| ರೋಗಿಗಳ ಶುಶ್ರೂಷೆ ಮಾಡುವುದು | ನರ್ಸ್ |
| ಪೈಂಟ್ ಕೊಡುವುದು | |
| ಕಿಟಿಕಿ ಬಾಗಿಲುಗಳನ್ನು ನಿರ್ಮಿಸುವುದು | |
| ವಿಳಾಸ ನೋಡಿ ಕಾಗದಗಳನ್ನು ತಲುಪಿಸುವುದು | |
| ಕೃಷಿ ಮಾಡುವುದು | |

ನಮ್ಮ ರಾಜ್ಯದ ಕೆಲವು ಕಸುಬುಗಳನ್ನು ಗಮನಿಸಿರಿ. ಇವುಗಳಲ್ಲಿ ನಿಮ್ಮ ಊರಿನಲ್ಲಿರುವವುಗಳು ಯಾವುವೆಂದು ಪರಿಸರ ಪುಸ್ತಕದಲ್ಲಿ ಬರೆಯಿರಿ.





ರೋಗಿಗಳಿಗೆ ಚಿಕಿತ್ಸೆ ನೀಡುವುದು
ಮಣ್ಣಿನ ಪಾತ್ರೆ ನಿರ್ಮಿಸುವುದು
ಹುರಿಹಗ್ಗ ತಯಾರಿ
ಬುಟ್ಟಿ ಹೆಣೆಯುವುದು
ತಿಂಡಿ ಮಾಡುವುದು
ಪಾಠ ಹೇಳುವುದು
ಕೃಷಿ
ಮರದ ಕೆಲಸ
ಶಾಂತಿ ಪಾಲನೆ
ಚಿನ್ನದ ಕೆಲಸ
ವಾಹನಗಳನ್ನು ಚಲಾಯಿಸುವುದು
ಬಟ್ಟೆ ನೇಯ್ಗೆ

ಕಟ್ಟಡಗಳ ನಿರ್ಮಾಣ
ಚಪ್ಪಲಿ ಹೊಲಿಯುವುದು
ಮೀನುಗಾರಿಕೆ
ರಬ್ಬರ್ ಟ್ಯಾಪಿಂಗ್
ಪೀಠೋಪಕರಣಗಳ ತಯಾರಿ
ಕಲ್ಲು ಒಡೆಯುವುದು
ಚಾ ಎಲೆ ಕೀಳುವುದು
ಕೇಸು ವಾದಿಸುವುದು
ಮಯಣದ ಬತ್ತಿ ತಯಾರಿಸುವುದು
ಫೋಟೋ ತೆಗೆಯುವುದು
ಪತ್ರಿಕೆ ಮಾರಾಟ ಮಾಡುವುದು
ವಾಹನ ರಿಪೇರಿ





ಇವುಗಳಲ್ಲದೆ ಬೇರೆ ಯಾವ ಕಸುಬು ನಿಮ್ಮ ಊರಲ್ಲಿವೆ? ಬರೆಯಿರಿ.

ನಮ್ಮ ಊರಿನಲ್ಲಿ ಹಲವು ವಿಧದ ಕಸುಬುಗಳಿವೆಯೆಂದು ತಿಳಿಯಿತಲ್ಲವೆ? ಜೀವನೋಪಾಯಕ್ಕೆ ಉದ್ಯೋಗವೆಂಬುದು ಅನಿವಾರ್ಯ. ಎಲ್ಲರೂ ಕೆಲಸ ಮಾಡುವಾಗ ಊರು ಅಭಿವೃದ್ಧಿಯಾಗುವುದು. ವಿವಿಧ ಕಸುಬುಗಳಲ್ಲಿ ತೊಡಗಿರುವವರ ಸೇವೆ ನಮಗೆ ಅಗತ್ಯವಾಗಿದೆ. ಆದುದರಿಂದಲೇ ಎಲ್ಲಾ ಉದ್ಯೋಗಗಳೂ ಸಮಾನ ಪ್ರಾಧಾನ್ಯ ಉಳ್ಳವುಗಳಾಗಿವೆ.

## ಹಲವು ಕೈಗಳ ಮೂಲಕ...

ನೀವು ಭತ್ತದ ಕೃಷಿಯನ್ನು ನೋಡಿರುವಿರಾ? ತೆನೆ ತುಂಬಿದ ಭತ್ತದ ಗದ್ದೆ ನೋಡಲೆಷ್ಟು ಸುಂದರ! ನಿಮ್ಮ ಊರಿನಲ್ಲಿ ಭತ್ತದ ಗದ್ದೆಗಳಿವೆಯೇ?

ನಮ್ಮ ಶಾಲೆಗೆ ತರುವ ಮಧ್ಯಾಹ್ನದೂಟದ ಅಕ್ಕಿ ಇಂತಹ ಭತ್ತದ ಗದ್ದೆಗಳಲ್ಲಿ ಬೆಳೆದವುಗಳೆಂಬುದನ್ನು ತಿಳಿದಿರುವಿರಾ?

ಭತ್ತದ ಕೃಷಿಯ ಹಂತಗಳು ಯಾವುವು?

- ಗದ್ದೆ ಉಳುವುದು
- ಬೀಜ ಬಿತ್ತುವುದು





- ನೇಜಿ ಕೀಳುವುದು
- ನೇಜಿ ನೆಡುವುದು
- ನೀರು ಹಾಗೂ ಗೊಬ್ಬರ ಹಾಕುವುದು
- ಕಳೆ ಕೀಳುವುದು

- ಭತ್ತ ಕೊಯ್ಯುವುದು
- ಪೈರು ಬಡಿಯುವುದು

ಎಷ್ಟೆಲ್ಲಾ ಕೆಲಸಗಾರರು ಇದಕ್ಕಾಗಿ ಕೆಲಸ ಮಾಡಿರಬಹುದು?



ಗದ್ದೆಗಳಲ್ಲಿ ಬೆಳೆಯುವ ಭತ್ತ ಅಕ್ಕಿಯಾಗಿ ನಮ್ಮ ಕೈಸೇರಲು ಇನ್ನೂ ಹಲವಾರು ಕಾರ್ಮಿಕರ ಶ್ರಮ ಅಗತ್ಯವಾಗಿದೆ.

ಕೆಳಗೆ ಕೊಟ್ಟಿರುವ ಚಿತ್ರಗಳಿಂದ ಅವರು ಯಾವೆಲ್ಲ ಕೆಲಸಗಳನ್ನು ಮಾಡುವರೆಂದು ಕಂಡುಹಿಡಿಯಬಹುದೇ?










ಇದೇ ರೀತಿ ಹಲವಾರು ಮಂದಿಯ ಪ್ರಯತ್ನದ ಫಲವಾಗಿ ಬಟ್ಟೆಗಳು ನಿಮ್ಮ ಕೈ ತಲುಪುವುದು. ಹತ್ತಿಯಿಂದ ನೂಲು ತೆಗೆಯವುದರಿಂದ ಆರಂಭಿಸಿ, ಬಟ್ಟೆಗೆ ಬಣ್ಣಹಾಕಿ ಅಂಗಡಿಗೆ ತಲುಪುವ ವರೆಗೆ ಬಟ್ಟೆ ತಯಾರಿಯು ಹಲವು ಹಂತಗಳ ಮೂಲಕ ಹಾದುಹೋಗುವುದು.


**ಬಟ್ಟೆ**

- ಹತ್ತಿಯ ಕೃಷಿ
- ▼ ಹತ್ತಿಯ ಸಂಗ್ರಹ
- ▼ ಹತ್ತಿಯನ್ನು ನೂಲನ್ನಾಗಿಸುವುದು
- ▼ ಬಣ್ಣದಲ್ಲಿ ಮುಳುಗಿಸುವುದು
- ▼ ಬಟ್ಟೆ ನೇಯುವುದು
- ▼ ಬಟ್ಟೆ ವ್ಯಾಪಾರ
- ▼ ಬಟ್ಟೆ ಹೊಲಿಯುವುದು




ದೈನಂದಿನ ಜೀವನದಲ್ಲಿ ನಾವು ಉಪಯೋಗಿಸುವ ಪ್ರತಿಯೊಂದು ಉತ್ಪನ್ನವೂ ಅನೇಕ ವೃತ್ತಿಕ್ಷೇತ್ರಗಳ ಮೂಲಕ ಹಾದು ಹೋಗುವುದು.

## ಹಳೆಯ ಗೆಳೆಯನನ್ನು ಪರಿಚಯಿಸಿಕೊಳ್ಳೋಣ



ಸ್ನೇಹಿತರೇ, ನೀವು ನನ್ನನ್ನು ನೋಡಿರುವಿರಾ? ನನ್ನ ಹೆಸರು ನೇಗಿಲು. ನನ್ನ ಪೂರ್ತಿ ಜೀವನವನ್ನು ಕೃಷಿಗಾಗಿ ವಿನಿಯೋಗಿಸಿದೆ. ನೆಲವನ್ನು ಉಳುವು ದಕ್ಕಾಗಿ ನನ್ನನ್ನು ಉಪಯೋಗಿಸುತ್ತಿದ್ದರು. ಟ್ರಾಕ್ಟರ್ ನಂತಹ ಯಂತ್ರಗಳು ಬಂದಾಗ ನನ್ನಂಥವರಿಗೆ ಕೆಲಸವಿಲ್ಲದಾಯಿತು. ಇಂದು ನಮ್ಮನ್ನುಪಯೋಗಿಸಿ ಗದ್ದೆ ಉಳುವವರು ಬಹಳ ವಿರಳ. ಇನ್ನು ಕೆಲವು ವರ್ಷಗಳು ಕಳೆದರೆ ನಮ್ಮನ್ನು ಕಾಣಸಿಗದು. ನನ್ನ ಗೆಳೆಯನಾದ ಏತವೂ ಇಂದು ಕಾಣಲು ಸಿಗುವುದಿಲ್ಲ. ಕೃಷಿ ಸ್ಥಳಗಳಿಗೆ ನೀರು ಹಾಯಿಸಲು ಅವನನ್ನು ಉಪಯೋಗಿಸುತ್ತಿದ್ದರು. ಹೀಗೆ ಅದೆಷ್ಟು ಸ್ನೇಹಿತರು! ಯಂತ್ರಗಳ ಈ ಯುಗದಲ್ಲಿ ನಮ್ಮಂಥವರಿಗೆ ಯಾವ ಬೆಲೆ? ನಮ್ಮನ್ನು ಮರೆಯದಿರಲು ಒಂದು ಚಿತ್ರವನ್ನಾದರೂ ಸಂಗ್ರಹಿಸಿಡಿರಿ.



ನೇಗಿಲು ಹೇಳಿದ್ದನ್ನು ಗೆಳೆಯರು ಕೇಳಿದಿರಲ್ಲವೇ?

ಪ್ರತಿಯೊಂದು ಕೆಲಸಕ್ಕೂ ಕೆಲವೊಂದು ಉಪಕರಣಗಳು ಅಗತ್ಯವಾಗಿದೆ.

## ಕೆಲಸ ಮತ್ತು ಉಪಕರಣಗಳು

ಕೃಷಿಗೆ ಅಗತ್ಯವಾದ ಉಪಕರಣಗಳು ಯಾವುವು?

ಕೃಷಿಗೆ ಉಪಯೋಗಿಸುವ ಉಪಕರಣಗಳನ್ನೇ ಇತರ ಕೆಲಸಗಳಿಗೂ ಉಪಯೋಗಿಸುತ್ತಾರೆಯೇ?

ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಕೆಲವು ಕೆಲಸಗಳನ್ನು, ಉಪಕರಣಗಳನ್ನು ಹಾಗೂ ಅವುಗಳ ಉಪಯೋಗಗಳನ್ನು ನಮಗೆ ತಿಳಿಯಬಹುದು.

| ಕೆಲಸ | ಉಪಕರಣದ ಹೆಸರು | ಉಪಯೋಗ |
|---|---|---|
| ಪೈಂಟಿಂಗ್ | ಬ್ರಷ್ | ಪೈಂಟಿಂಗ್ ಮಾಡಲು |
| ಮೀನುಗಾರಿಕೆ | ಬಲೆ | ಮೀನು ಹಿಡಿಯಲು |
| ರೋಗಿಗಳಿಗೆ ಚಿಕಿತ್ಸೆ ನೀಡುವುದು | ಸ್ಟೆತಸ್ಕೋಪ್ | ರೋಗ ನಿರ್ಣಯಿಸಲು |
| ಮರದ ಕೆಲಸ | ಉಳಿ, ಸುತ್ತಿಗೆ | ಮರದ ಸಾಮಗ್ರಿಗಳನ್ನು ತಯಾರಿಸಲು |










ನಿತ್ಯಜೀವನದಲ್ಲಿ ನಾವು ಅನೇಕ ಕೆಲಸಗಳನ್ನು ಮಾಡಬೇಕಾಗುತ್ತದೆ. ಅವುಗಳನ್ನು ಸುಲಭಗೊಳಿಸಲು ವಿವಿಧ ಉಪಕರಣಗಳನ್ನು ಉಪಯೋಗಿಸುವರು. ಹಲವು ಅಗತ್ಯಗಳನ್ನು ಪರಿಗಣಿಸಿ, ಕೆಲವು ಉಪಕರಣಗಳು ಯಂತ್ರಗಳಿಗೆ ಸ್ಥಾನ ಬಿಟ್ಟುಕೊಟ್ಟವು.





ಕೆಳಗೆ ಕೊಟ್ಟಿರುವ ಕೆಲಸದ ಉಪಕರಣಗಳನ್ನು ನೋಡಿರಿ. ಅವುಗಳ ಹೆಸರು ಮತ್ತು ಪ್ರತಿಯೊಂದು ಯಾವ ಕೆಲಸಕ್ಕೆ ಸಂಬಂಧಪಟ್ಟವುಗಳೆಂದು ಪರಿಸರ ಪುಸ್ತಕದಲ್ಲಿ ಬರೆಯಿರಿ.

ಕೆಲಸದ ಉಪಕರಣಗಳಿಗೆ ಯೋಗ್ಯವಾದ ಬಣ್ಣ ಹಚ್ಚಿರಿ.



## ಕೆಲಸದ ಮಹತ್ವ


ರಾಮುವಿನ ಮನೆಮಂದಿ ಮಾಡುವ ಕೆಲಸಗಳನ್ನು ಗಮನಿಸಿದಿರಲ್ಲವೇ?

ಎಲ್ಲಾ ಕೆಲಸಗಳನ್ನು ಒಬ್ಬರೇ ಮಾಡುತ್ತಾರೆಯೇ?

ನಿಮ್ಮ ಮನೆಯಲ್ಲೂ ಇದೇ ರೀತಿಯೇ?

ಮನೆಕೆಲಸಗಳಲ್ಲಿ ನೀವು ನೀಡುವ ಸಹಾಯಗಳು ಯಾವುವು?






ಇತರ ಕೆಲಸಗಳಂತೆಯೇ ಮನೆಕೆಲಸಗಳೂ ಬಹಳ ಪ್ರಧಾನವಾದವುಗಳಾಗಿವೆ. ಮನೆಯವರೆಲ್ಲರೂ ಸೇರಿ ಮನೆಕೆಲಸಗಳನ್ನು ಮಾಡುವುದು ಉತ್ತಮ.

## ಕಸುಬುಗಳ ಸಮೀಕ್ಷೆ

ನಿಮ್ಮ ಮನೆ ಪರಿಸರದಲ್ಲಿರುವ ಹೆಚ್ಚಿನ ಜನರು ಯಾವ ಕಸುಬಿನಲ್ಲಿ ಏರ್ಪಟ್ಟಿರುವರು? ಒಂದು ಸರಳ ಸಮೀಕ್ಷೆಯ ಮೂಲಕ ಕಂಡುಹಿಡಿಯುವ. ನಿಮ್ಮ ಮನೆಯೂ ಸೇರಿದಂತೆ ಐದು ಮನೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಟ್ಟಿಯಲ್ಲಿ ತುಂಬಿಸಿರಿ.

| ಸಂಖ್ಯೆ | ಮನೆ ಹೆಸರು | ಕೆಲಸ ಮಾಡುವವರ ಹೆಸರು | ಕಸುಬು |
|---|---|---|---|
| 1 | | •<br>•<br>• | •<br>•<br>• |
| 2 | | •<br>•<br>• | •<br>•<br>• |
| 3 | | •<br>•<br>• | •<br>•<br>• |
| 4 | | •<br>•<br>• | •<br>•<br>• |
| 5 | | •<br>•<br>• | •<br>•<br>• |

ಸಂಗ್ರಹಿಸಿದ ಮಾಹಿತಿಗಳನ್ನು ಕೆಳಗಿನ ಪಟ್ಟಿಯಲ್ಲಿ ಸೇರಿಸಬಹುದು.

| ಕಸುಬಿನ ಹೆಸರು | ಕೆಲಸ ಮಾಡುವವರ ಸಂಖ್ಯೆ | | | | | ಒಟ್ಟು ಸಂಖ್ಯೆ |
|---|---|---|---|---|---|---|
| | ಮನೆ 1 | ಮನೆ 2 | ಮನೆ 3 | ಮನೆ 4 | ಮನೆ 5 | |
| | | | | | | |
| | | | | | | |
| | | | | | | |
| | | | | | | |

ಸಮೀಕ್ಷೆಯಿಂದ ನಿಮ್ಮ ಪ್ರದೇಶದ ಜನರ ವಿವಿಧ ಕಸುಬುಗಳನ್ನು ಕಂಡುಹಿಡಿದಿರಲ್ಲವೇ? ಹೆಚ್ಚಿನ ಜನರು ಯಾವ ಕಸುಬಿನಲ್ಲಿ ತೊಡಗಿರುವರೆಂದು ಪಟ್ಟಿಯಿಂದ ಕಂಡುಹಿಡಿಯಬಹುದಲ್ಲವೇ? ಬೇರೆ ಬೇರೆ ಕಸುಬುಗಳಲ್ಲಿ ತೊಡಗಿರುವವರು ನಮ್ಮ ಊರಿನಲ್ಲಿದ್ದಾರೆ. ಪ್ರಾದೇಶಿಕ ಭಿನ್ನತೆಯನ್ನು ಹೊಂದಿಕೊಂಡು ಕೆಲವು ಕಸುಬುಗಳು ಹೆಚ್ಚಾಗಿ ಕಂಡುಬರುವುದು. ಉದಾಹರಣೆಗೆ ತೀರಪ್ರದೇಶದಲ್ಲಿ ವಾಸಿಸುವ ಹೆಚ್ಚಿನ ಜನರು ಮೀನುಗಾರಿಕೆಗೆ ಸಂಬಂಧಿಸಿದ ಕೆಲಸಗಳಲ್ಲಿ ಏರ್ಪಟ್ಟಿರುತ್ತಾರೆ. ವಿವಿಧ ಕಸುಬುಗಳಲ್ಲಿರುವವರ ಸಹಾಯ ನಮಗೆ ಅತಿ ಅಗತ್ಯವಾಗಿದೆ.

## ನಾವು ಹೇಳಲೇ....



ನನ್ನ ತಂದೆ ಒಬ್ಬ ಉತ್ತಮ ಕೃಷಿಕ. ತಂದೆಯ ಹಾಗೆ ನಾನೂ ಉತ್ತಮ ಕೃಷಿಕನಾಗುವೆನು.

ಉತ್ತಮ ಅಧ್ಯಾಪಿಕೆಯಾಗಲು ನನಗಿಷ್ಟ. ಅನೇಕ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಲು ನಾನು ಪ್ರಯತ್ನಿಸುವೆನು.





ನಾನು ಒಬ್ಬ ಜಾಣ ವ್ಯಾಪಾರಿಯಾಗುವೆನು. ಊರಿನವರಿಗೆ ಬೇಕಾಗುವ ಎಲ್ಲಾ ವಸ್ತುಗಳೂ ನನ್ನ ಅಂಗಡಿಯಲ್ಲಿರಬೇಕು.



ನಮ್ಮ ದೇಶವನ್ನು ರಕ್ಷಿಸುವ ಸೈನಿಕರು ನನಗೆ ತುಂಬಾ ಇಷ್ಟ. ಒಬ್ಬ ಸೈನಿಕನಾಗಬೇಕೆಂಬುದು ನನ್ನ ಆಸೆ.



ಬಡರೋಗಿಗಳಿಗೆ ಚಿಕಿತ್ಸೆ ನೀಡಲು ನನಗೆ ಆಸಕ್ತಿ ಇದೆ. ನಾನೊಬ್ಬ ಡಾಕ್ಟರಾಗುವೆನು, ಖಂಡಿತ.



ಪ್ರಯಾಣಿಕರನ್ನು ಯಾವುದೇ ಅಪಘಾತವಿಲ್ಲದೆ ಸುರಕ್ಷಿತವಾಗಿ ತಲುಪಿಸುವ ಒಬ್ಬ ಸಮರ್ಥ ಬಸ್‌ಡ್ರೈವರ್ ಆಗಲು ನನಗೆ ಇಷ್ಟ.

ಆದರೆ ನಾನೋ?

.................................................................................

.................................................................................


.................................................................................

ಗೆಳೆಯರು ಹೇಳಿದ್ದನ್ನು ಓದಿದಿರಲ್ಲವೇ? ಎಲ್ಲಾ ಕಸುಬುಗಳೂ ಪ್ರಧಾನವಾದವುಗಳೆಂದು ತಿಳಿಯಿತಲ್ಲವೇ?



ಯಾವ ಕೆಲಸವನ್ನು ಆಯ್ದುಕೊಂಡರೂ ಅದನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಸಾಮರ್ಥ್ಯ ಮತ್ತು ಅನುಭವವು ಎಲ್ಲಾ ಕೆಲಸಗಳಿಗೆ ಅತೀ ಅಗತ್ಯ. ಎಲ್ಲ ಕೆಲಸಗಳು ಒಂದೇ ರೀತಿ ಪ್ರಾಧಾನ್ಯವಿರುವವುಗಳಾಗಿವೆ. ನಾವು ಮಾಡುವ ಯಾವುದೇ ಕೆಲಸ ಅತಿ ಮಹತ್ವವುಳ್ಳದ್ದಾಗಿದೆಯೆಂದು ತಿಳಿದು ಕಾರ್ಯಪ್ರವೃತ್ತರಾಗಿರಿ.

Edubuntu School Resources - 'ಬಟ್ಟೆ ನಿರ್ಮಾಣದ ವಿವಿಧ ಹಂತಗಳು' ನೋಡಿರಿ.




## ಕಲಿಕೆಯ ಪ್ರಧಾನ ಸಾಧನೆಗಳು

- ವಿವಿಧ ಕಸುಬುಗಳನ್ನು ಪಟ್ಟಿ ಮಾಡಲು ಸಾಧ್ಯವಾಗುವುದು.
- ಒಂದು ಉತ್ಪನ್ನ ತಯಾರಾಗುವುದು ಬೇರೆ ಬೇರೆ ರೀತಿಯ ಕಾರ್ಮಿಕರ ಪ್ರಯತ್ನದ ಫಲವಾಗಿದೆ ಎಂಬುದನ್ನು ವಿವರಿಸಲು ಸಾಧ್ಯವಾಗುವುದು.
- ವಿವಿಧ ಕೆಲಸಗಳಿಗೆ ಅಗತ್ಯವಾದ ಉಪಕರಣಗಳನ್ನು ಪತ್ತೆಹಚ್ಚಲು, ಅವುಗಳ ಉಪಯೋಗಗಳನ್ನು ಹೇಳಲು ಸಾಧ್ಯವಾಗುವುದು.
- ತನ್ನ ಊರಿನ ಹೆಚ್ಚಿನ ಜನರು ಯಾವ ಕಸುಬಿನಲ್ಲಿ ತೊಡಗಿಸಿಕೊಂಡಿರುವರೆಂದು ಸಮೀಕ್ಷೆಯ ಮೂಲಕ ಕಂಡುಹಿಡಿಯಲು ಸಾಧ್ಯವಾಗುವುದು.
- ಪ್ರತಿಯೊಂದು ಕಸುಬಿಗೂ ಅದರದ್ದೇ ಆದ ಮಹತ್ವವಿದೆ ಎಂಬುದನ್ನು ತಿಳಿಯಲು ಸಾಧ್ಯವಾಗುವುದು.

## ಮೌಲ್ಯಮಾಪನ ಮಾಡೋಣ

(1) ಗುಂಪಿಗೆ ಸೇರದ ಜೊತೆಯನ್ನು ಪತ್ತೆಹಚ್ಚಿರಿ.

A. ಉಳಿ, ಗರಗಸ

B. ನೇಗಿಲು, ಹಾರೆ

C. ಹೊಲಿಗೆ ಯಂತ್ರ, ಕತ್ತರಿ

D. ಡ್ರೈವರ್, ಮೆಕಾನಿಕ್

(2) ಭತ್ತದ ಕೃಷಿಯ ಹಂತಗಳಲ್ಲಿ ಒಳಪಡದ ಕೆಲಸ ಯಾವುದು?

A. ಕೊಯ್ಲು

B. ಅಕ್ಕಿಯ ಮಾರಾಟ

C. ಪೈರು ಬಡಿಯುವುದು

D. ನೇಜಿ ನೆಡುವುದು

(3) ರಾಮುವಿನ ಊರಿನಲ್ಲಿ ಎಲ್ಲಾ ಸೌಕರ್ಯಗಳಿರುವ ಒಂದು ಹೊಸ ಆಸ್ಪತ್ರೆಯು ಕಾರ್ಯಾರಂಭಗೊಂಡಿತು. ಆಸ್ಪತ್ರೆಯ ಚಟುವಟಿಕೆಯು ಸೂಕ್ತ ರೀತಿಯಲ್ಲಿ ನಡೆಯಬೇಕಾದರೆ ಪ್ರತಿಯೊಬ್ಬರು ಮಾಡಬೇಕಾದ ಸೇವೆ ಯಾವುದೆಂದು ಪಟ್ಟಿ ಮಾಡಿರಿ.

| ಕೆಲಸಗಾರರು | ಸೇವೆಗಳು |
|---|---|
| | |
| | |
| | |

(4) ನಿಮ್ಮ ಊರಿನಲ್ಲಿ ವಾಹನಗಳನ್ನು ರಿಪೇರಿ ಮಾಡುವವರು ಯಾರೂ ಇಲ್ಲವೆಂದು ಭಾವಿಸಿರಿ. ಇದರಿಂದ ನಿಮ್ಮ ಊರಿನ ಜನರಿಗೆ ಉಂಟಾಗುವ ಸಮಸ್ಯೆಗಳೇನು?

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಊರಿನ ಒಂದು ಕಾರ್ಯಾಗಾರವನ್ನು ಸಂದರ್ಶಿಸಿರಿ. ಅಲ್ಲಿ ಪ್ರತಿಯೊಬ್ಬರು ಯಾವೆಲ್ಲ ಕೆಲಸಗಳನ್ನು ನಿರ್ವಹಿಸುವರು? ಯಾರೆಲ್ಲರ ಪ್ರಯತ್ನದ ಫಲವಾಗಿ ಉತ್ಪನ್ನಗಳು ಹೊರಬರುವುದು?
- ಕೆಲಸದ ಉಪಕರಣಗಳ ಚಿತ್ರಗಳನ್ನು ಸಂಗ್ರಹಿಸಿ ಉಪಕರಣಗಳ ಹೆಸರು, ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ಬರೆದು ಒಂದು ಆಲ್ಬಂ ತಯಾರಿಸಿರಿ.